
ಡಾ. ಸ್ವೆಟೊಸ್ಲಾವ್ ರೋರಿಕ್

DR. SVETOSLAV ROERICH



ಕರ್ನಾಟಕ ಲಲಿತಕಲಾ ಅಕಾಡೆಮಿ KARNATAKA LALITHKALA ACADEMY



ಎಂ.ಎಸ್. ನಂಜುಂಡರಾವ್

ಕರ್ನಾಟಕದ ಅನೇಕಾನೇಕ ಉತ್ತಮ ಕಲಾವಿದರು ರಾಷ್ಟ್ರೀಯ, ಅಂತರರಾಷ್ಟ್ರೀಯ ಖ್ಯಾತಿಗಳಿಸಿದ್ದಾರೆ. ಇಂತಹ ಖ್ಯಾತಿಗೆ ಪಾತ್ರರಾಗಿರುವವರಲ್ಲಿ ಕೆಲವರು ತಮ್ಮ ಸೃಜನಶೀಲ ಕೃತಿ ರಚನೆಯಿಂದ ಹೆಸರು ಪಡೆದಿದ್ದರೆ ಮಿಕ್ಕ ಕೆಲವರು ಕಲೆಯ ಶಿಕ್ಷಣ ಮತ್ತು ಅದರ ಬೆಳವಣಿಗೆಗೆ ಅವಶ್ಯಕವಾದ ಸಂಸ್ಥೆಗಳನ್ನು ಸಂಘಟಿಸುವಲ್ಲಿ ನಿರತರಾಗಿದ್ದಾರೆ. ಅಂತಹವರಲ್ಲಿ ಮೊದಲ ಪಂಕ್ತಿಗೆ ಸೇರುವವರು ಬೆಂಗಳೂರಿನ ಶ್ರೀ ಎಂ.ಎಸ್. ನಂಜುಂಡರಾವ್.

ನಂಜುಂಡರಾಯರು ತಮ್ಮ ಕಲಾ ವ್ಯಾಸಂಗವನ್ನು ಮೈಸೂರಿನ ಚಾಮರಾಜ ತಾಂತ್ರಿಕ ಶಾಲೆಯಲ್ಲಿ ಪಡೆದು, ಪದವಿಯನ್ನು ಗಳಿಸಿ ಕೃತಿ ರಚನೆಗೆ ತೊಡಗಿದವರು. ಇವರಿಗೆ ವಿಶೇಷ ಆಸಕ್ತಿ ಹುಟ್ಟಿದ್ದು ನಾಡಿನ ಶ್ರೇಷ್ಠಮಟ್ಟದ ಕಲಾಸಂಪತ್ತನ್ನು ಉಳಿಸಿ, ಬೆಳೆಸಲು ಅವಶ್ಯಕವಾದ ಸಂಸ್ಥೆಯೊಂದರ ಸ್ಥಾಪನೆ. ಹೀಗೆ ಜನ್ಮ ತಾಳಿದ್ದು ಕರ್ನಾಟಕ ಚಿತ್ರಕಲಾ ಪರಿಷತ್ತು. ಸಂಸ್ಥೆ ಸ್ಥಾಪನೆಯಾದ ತಾರುಣ್ಯದಲ್ಲಿಯೇ ಚಿತ್ರಕಲಾ ವಿದ್ಯಾಲಯ ಎಂಬ ಕಲಾ ಶಿಕ್ಷಣ ವಿಭಾಗದ ಪ್ರಾರಂಭ, ಅವರ ಎಡಬಿಡದ ಚಟುವಟಿಕೆ, ಛಲ ಮತ್ತು ಸಂಘಟನಾ ಶಕ್ತಿಗಳಿಂದ ಪರಿಷತ್ತು ಹೆಮ್ಮರವಾಗಿ ಬೆಳೆಯಿತು. ಕಲಾಶಾಲೆ ಪ್ರೌಢಶಾಲೆಯಾಗಿ ಪರಿವರ್ತನೆಗೊಂಡಿತು. ಪರಿಷತ್ತಿನ ಆಧುನಿಕ, ವಿಶಾಲವಾದ ಗ್ಯಾಲರಿಗಳು ಅನೇಕಾನೇಕ ಕಲಾ ಪ್ರದರ್ಶನಗಳನ್ನು ಆಕರ್ಷಿಸಿವೆ. ಅದರ ಸಂಗ್ರಹದಲ್ಲೂ ವೈವಿಧ್ಯಪೂರ್ಣ ಸಾಂಪ್ರದಾಯಿಕ ಕೃತಿಗಳು, ಬೆಲೆಬಾಳುವ ತೊಗಲುಗೊಂಬೆಗಳು, ಲೋಕವಿಖ್ಯಾತ ರೋರಿಕ್‌ರ ಚಿತ್ರಗಳೂ ಅಲ್ಲದೇ ಇತ್ತೀಚೆಗೆ ಶ್ರೀ ಹೆಚ್.ಕೆ. ಕೇಜರಿವಾಲ್‌ರವರಿಂದ ಕೊಡಲ್ಪಟ್ಟ ಬಂಗಾಲದ ಸುಪ್ರಸಿದ್ಧ ಕಲಾವಿದರ ಕೃತಿಗಳೂ ಸೇರಿವೆ. ಇದೆಲ್ಲಾ ನಂಜುಂಡರಾಯರ ಸಾಧನೆ.

ರಾಯರು ಸಮಯಸಿಕ್ಕಾಗ ಬರವಣಿಗೆಯತ್ತಲೂ ಗಮನ ಹರಿಸಿದ್ದಾರೆ. ಅವರ ನಿಕಟವರ್ತಿಗಳಾಗಿದ್ದ ಡಾ. ಸ್ವೆಟಾಸ್ಲಾವ್ ರೋರಿಕ್ ಅವರನ್ನು ಕುರಿತ ಈ ಕೃತಿ ಅಂತಹ ಬರವಣಿಗಗಳಲ್ಲೊಂದು. ಇಂತಹ ಮತ್ತೂ ಒಂದೆರಡು ರಚನೆಗಳನ್ನು ಅಕಾಡೆಮಿಯ ಮೂಲಕ ಎದುರು ನೋಡಬಹುದು.

ಸ್ವೆಟೊಸ್ಲಾವ್ ರೋರಿಕ್

ಎಂ.ಎಸ್. ನಂಜುಂಡರಾವ್

ಕರ್ನಾಟಕ ಲಲಿತ ಕಲಾ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು - ೫೬೦ ೦೦೨

SVETASLOV ROERICH
A Biography By M.S. Nanjunda Rao
Published by K. Mukundan, *Registrar*
Karnataka Lalitakala Academy
Nrupatunga Raod, Bangalore - 560 002

First Impression, 1994

Copies : 1000

ಬೆಲೆ ರೂ: 10-00

ಪ್ರಧಾನ ಸಂಪಾದಕರು
ಶ್ರೀ ಪಿ.ಆರ್. ತಿಪ್ಪೇಸ್ವಾಮಿ

ಪ್ರಕಟಣಾ ಸಮಿತಿ
ಶ್ರೀ ವಿ.ಟಿ. ಕಾಳೆ
ಶ್ರೀಮತಿ ಎಸ್. ಧನಲಕ್ಷ್ಮಿ
ಡಾ. ಬಿ.ಕೆ. ಹಿರೇಮಠ
ಶ್ರೀ ರಘುಪತಿಭಟ್
ಶ್ರೀ ವೈ.ಹೆಚ್. ಸೂಗೂರ್

ಮುದ್ರಣ
ಮಯೂರ್ ಪ್ರಿಂಟ್ ಆ್ಯಡ್ಸ್
ನಂ. 201/66, ಕಾಟನ್‌ಪೇಟೆ ಮೈನ್ ರೋಡ್
ಬೆಂಗಳೂರು - 560 053
✆ 62 0203, 62 0303


ಮೊದಲ ಮಾತು

ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಮುಖ ಯೋಜನೆಗಳಲ್ಲಿ ರಾಜ್ಯದ ಹಾಗೂ ರಾಷ್ಟ್ರದ ಕಲಾವಿದರು ಮತ್ತು ಅವರ ಕೃತಿಗಳ ಬಗ್ಗೆ ಪುಸ್ತಕಗಳನ್ನು ಪ್ರಕಟಿಸುವುದು ಒಂದು. ಈ ಪುಸ್ತಕಗಳು ಆ ಹೆಸರಾಂತ ಕಲಾವಿದರ, ಅವರ ಕಲೆಯ ಪರಿಚಯ ಮಾಡಿಸುವುದರ ಜೊತೆಗೆ ಕಲೆಯು ಬೆಳೆದು ಬಂದ ದಾರಿ ಮತ್ತು ಅವರ ಜೀವನ ಚರಿತ್ರೆಯ ತಿಳುವಳಿಕೆ ಉಂಟುಮಾಡಲು ಸಹಾಯವಾಗಬಲ್ಲದು.

ಈಗ ಪ್ರಕಟವಾಗುತ್ತಿರುವ ಪುಸ್ತಕ ಹೆಸರಾಂತ ಕಲಾವಿದ ಸ್ವೆಟಾಸ್ಲಾವ್ ರೋರಿಕ್ ಅವರನ್ನು ಕುರಿತದ್ದು. ಅವರು ಮೂಲತಃ ರಷ್ಯಾದೇಶದವರಾದರೂ, ಅವರು ನೆಲಸಿದ್ದು ಭಾರತದಲ್ಲಿ, ಅದರಲ್ಲೂ ಕರ್ನಾಟಕದ ಬೆಂಗಳೂರು ನಗರದಲ್ಲಿ. ಅವರು ಇಲ್ಲಿದ್ದಾಗ ರಾಜ್ಯದ ಕಲಾ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು ಮತ್ತು ಅವರು ರಚಿಸಿರುವ ಕೃತಿಗಳಲ್ಲಿ ನಮ್ಮ ದೇಶದ ಹಾಗೂ ರಷ್ಯನ್ ಕಲಾ ಪರಂಪರೆಗಳ ಸಮ್ಮಿಶ್ರತೆಯಿದ್ದು, ತಮ್ಮ ಸುತ್ತಲಿನ ಪರಿಸರ, ಜೀವನದ ಚಿತ್ರಣವಿದೆ, ಕೃತಿಗಳಲ್ಲಿ ಅವರು ಉಪಯೋಗಿಸುತ್ತಿದ್ದ ವರ್ಣಗಳು ಸಮೃದ್ಧ. ಇಂತಹ ಕಲಾವಿದನ ಕೃತಿಗಳನ್ನು ಮತ್ತು ಅವರ ಜೀವನವನ್ನು ಕನ್ನಡಿಗರಿಗೆ ಪರಿಚಯಿಸುವುದೇ ಈ ಪುಸ್ತಕದ ಉದ್ದೇಶವಾಗಿದೆ.

ಶ್ರೀ ಎಂ.ಎಸ್. ನಂಜುಂಡರಾವ್ ಅವರು, ರೋರಿಕ್ ಅವರನ್ನು ತುಂಬಾ ಹತ್ತಿರದಿಂದ ತಿಳಿದವರಾಗಿದ್ದು, ಈ ಪುಸ್ತಕವನ್ನು ಬರೆದುಕೊಟ್ಟಿದ್ದಾರೆ. ಅವರಿಗೆ ಅಕಾಡೆಮಿಯ ಪರವಾಗಿ ವಂದನೆಗಳನ್ನು ಸಲ್ಲಿಸುವೆ. ಕಲಾವಿದರು, ಕಲಾ ರಸಿಕರು ಮತ್ತು ಸಾಹಿತ್ಯಾಭಿಮಾನಿಗಳು ಅಕಾಡೆಮಿಯ ಈ ಪ್ರಯತ್ನವನ್ನು ಸ್ವಾಗತಿಸುವರೆಂದು ಆಶಿಸುತ್ತೇನೆ ಹಾಗೂ ಅಂದವಾಗಿ ಮುದ್ರಿಸಿಕೊಟ್ಟ ಮಯೂರ್ ಪ್ರಿಂಟ್ ಆ್ಯಡ್ಸ್‌ನ ಶ್ರೀ ಶ್ರೀನಿವಾಸರವರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಪಿ.ಆರ್. ತಿಪ್ಪೇಸ್ವಾಮಿ
ಅಧ್ಯಕ್ಷರು
ಕರ್ನಾಟಕ ಲಲಿತಕಲಾ ಅಕಾಡೆಮಿ



ಡಾ. ಸ್ವೆಟಾಸ್ಲಾವ್ ರೋರಿಕ್

ಸ್ವೆಟಾಸ್ಲಾವ್ ರೋರಿಕ್

ವಿಶ್ವ ವಿಖ್ಯಾತ ಚಿತ್ರಕಾರರ ಸಾಲಿನಲ್ಲಿ ಸೇರಿಸಬಹುದಾದ ಹೆಸರು ಡಾ. ಸ್ವೆಟಾಸ್ಲಾವ್ ರೋರಿಕ್. ತಮ್ಮ ತಂದೆಯವರಾದ ಪ್ರೊಫೆಸರ್ ನಿಕೋಲಾಸ್ ರೋರಿಕ್‌ರವರ ವರ್ಚಸ್ಸಿನಿಂದ ಪ್ರಭಾವಿತರಾಗಿ ತಮ್ಮ ಅಧ್ಯಯನ, ಸ್ವಯಂ ಪ್ರತಿಭೆ ಹಾಗೂ ವಿಶ್ವದ ಅನೇಕ ಅಭಿಮಾನಿಗಳ ಪ್ರೋತ್ಸಾಹದಿಂದಾಗಿ ಸ್ವೆಟಾಸ್ಲಾವ್ ರೋರಿಕ್ ಕಲಾವಿದರಾಗಿ ತಮ್ಮ ಅಂತಸ್ತನ್ನು ಅಂತರ ರಾಷ್ಟ್ರೀಯ ಕ್ಷೇತ್ರದಲ್ಲಿ ಬೆಳೆಸಿಕೊಂಡಿದ್ದಾರೆ. ಇವರು ರಚಿಸಿರುವ ಭಾವಚಿತ್ರಗಳು ವಿಶ್ವದ ಕಲಾ ಸಂಗ್ರಹಾಲಯಗಳ ಆಕರ್ಷಣೀಯ ಕೃತಿಗಳಾಗಿವೆ. ಇವರ ಸಂಯೋಜನಾ ಚಿತ್ರಗಳು ತಾವು ದೀರ್ಘಕಾಲ ವಾಸ ಮಾಡಿದ್ದ ಭಾರತೀಯ ಜನಜೀವನವನ್ನು ಹಾಗೂ ಅತ್ಯುತ್ತಮವಾದ ಪ್ರಕೃತಿ ದೃಶ್ಯಗಳು ಹಿಮಾಲಯದ ವರ್ಣಮಯ ಪರ್ವತಶ್ರೇಣಿಗಳನ್ನೂ ಪ್ರತಿಬಿಂಬಿಸುತ್ತವೆ. ಇದರ ಜೊತೆಗೆ ವಿಶ್ವದ ಅನೇಕ ವಿಷಯಗಳ ಅಭಿವ್ಯಕ್ತಿ ಇವರ ಕೆಲವು ಚಿತ್ರಗಳಲ್ಲಿ ನಿಯೋಜಿತವಾಗಿವೆ. ಹಾಗಾಗಿ ಅವರ ಕಲಾಕೃತಿಗಳು ರಾಷ್ಟ್ರಗಳ ಗಡಿಗಳನ್ನು ಮೀರಿ ಅವರ ಹೆಸರಿಗೆ ಅನ್ವರ್ಥವಾಗಿ (ರೋರಿಕ್ ಪದದ ಅರ್ಥ ಅತಿಶಯ ಕೀರ್ತಿ) ವಿಶ್ವ ಮಾನ್ಯತೆಗಳಿಸಿವೆ. ರೋರಿಕ್

ಕುಟುಂಬದವರು ರಷ್ಯಾ ಮತ್ತು ಭಾರತದ ಸಾಂಸ್ಕೃತಿಕ ಪರಂಪರೆಯ ಆಧಾರದ ಮೇಲೆ ಉಭಯ ದೇಶಗಳ ಭಾಂದವ್ಯವನ್ನು ಪೋಷಿಸಿ ಶ್ರೀಮಂತಗೊಳಿಸಿದ್ದಾರೆ. ಅಲ್ಲದೆ ಪಾಶ್ಚಿಮಾತ್ಯ ಕ್ಷೇತ್ರಕ್ಕೆ ಮೆರುಗು ಕೊಟ್ಟಿದ್ದಾರೆ. ಭಾರತದಲ್ಲಿ ತಮ್ಮ ವಾಸ್ತವ್ಯವನ್ನು ಪ್ರಾರಂಭಿಸಿದ ಮೇಲೆ ರಾಷ್ಟ್ರದ ಅನೇಕ ಪ್ರಮುಖ ಸಾಂಸ್ಕೃತಿಕ ವ್ಯಕ್ತಿಗಳೊಡನೆ ತಮ್ಮ ಬಾಂಧವ್ಯವನ್ನು ಬೆಳೆಸಿಕೊಂಡರು. ಅದರಲ್ಲಿ ಮುಖ್ಯವಾಗಿ ಮಹಾತ್ಮ ಗಾಂಧಿ, ವಿಶ್ವ ಕವಿ ರವೀಂದ್ರನಾಥ್ ಟಾಗೋರ್, ಮದನ ಮೋಹನ್ ಮಾಳವೀಯ, ಪಂಡಿತ್ ನೆಹರೂ, ಡಾ. ರಾಧಾಕೃಷ್ಣನ್, ಡಾ. ರಂಧಾವ, ಪಂಡಿತ್ ಪಂತ್, ಪದ್ಮನಾಭನ್ ತಂಪಿ, ನಿಹಾರ್ ರಂಜನ್ ರೇ, ಡಾ. ಮೋತಿಚಂದ್ರ, ಶ್ರೀ ಜಿ. ವೆಂಕಟಾಚಲಂರವರೊಡನೆ ಅವರು ಹೊಂದಿದ್ದ ನಿಕಟ ಸಂಪರ್ಕದಿಂದ ರೋರಿಕ್ ಭಾರತೀಯ ಸಾಂಸ್ಕೃತಿಕ ಕ್ಷೇತ್ರದಲ್ಲಿ ಚಿರಪರಿಚಿತರಾದರು. ರವೀಂದ್ರನಾಥ ಟಾಗೂರ್‌ರವರ ಸೋದರ ಸೊಸೆ ದೇವಿಕಾ ರಾಣಿಯವರೊಡನೆ 1946ರಲ್ಲಿ ವಿವಾಹವಾದ ಮೇಲಂತೂ ರಾಷ್ಟ್ರದ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರದೊಡನೆ ತಮ್ಮ ಬಾಂಧವ್ಯವನ್ನು ನಿಕಟಗೊಳಿಸಿಕೊಂಡರು. ರೋರಿಕ್ ದಂಪತಿಗಳಿಗೆ ಬೆಂಗಳೂರು ನಗರದಲ್ಲಿ ವಾಸಿಸುವ ಸಂದರ್ಭ ಒದಗಿದ್ದು ಧರ್ಮಾ ಕರ್ಮ ಸಂಯೋಗ.

1946ರ ಸುಮಾರಿಗೆ ಬೆಂಗಳೂರಿಗೆ ಈ ದಂಪತಿಗಳು ಭೇಟಿ ಇತ್ತಾಗ ಅಕಸ್ಮಾತ್ ಕನಕಪುರ ರಸ್ತೆಯಲ್ಲಿರುವ ತಾಟಗುಣಿ ಎಸ್ಟೇಟಿನ ಮಾಲೀಕರಾಗಿದ್ದ ಅಂಡರಸನ್‌ರವರ ಪರಿಚಯವಾಯಿತು. ತಾಟಗುಣಿ

ಎಸ್ಟೇಟಿನ ನಿಸರ್ಗ ಸೌಂದರ್ಯ, ಅಲ್ಲಿನ ಅಚ್ಚುಕಟ್ಟಾದ ಬಂಗಲೆ, ಶಾಂತ ವಾತಾವರಣ, ತೋಟ ಮಧ್ಯದ ಜಲಾಶಯ ಎಲ್ಲಕ್ಕಿಂತ ಮಿಗಿಲಾಗಿ ವಟ ವೃಕ್ಷದಡಿ ಇದ್ದ ಮುನೇಶ್ವರನಲ್ಲಿ ಇವರು ಆಕರ್ಷಿತರಾಗಿ ಎಸ್ಟೇಟನ್ನು ಕೊಂಡುಕೊಂಡರು. ಈ ತೋಟವನ್ನು ತಮ್ಮ ವಾಸ್ತವ್ಯಕ್ಕೆ ತಕ್ಕ ಸ್ಥಳವೆಂದು ಪರಿಗಣಿಸಿ ಇಲ್ಲಿಯೇ ವಾಸಮಾಡಲು ನಿರ್ಧರಿಸಿದರು. ಬೆಂಗಳೂರನ್ನು ತಮ್ಮ ವಾಸಸ್ಥಾನವನ್ನಾಗಿ ಮಾಡಿಕೊಂಡ ನಂತರ ದೇವಿಕಾ ರಾಣಿಯವರು ತಮ್ಮ ಸಿನಿಮಾ ಪ್ರಪಂಚದ ಪ್ರಮುಖ ಕೇಂದ್ರವಾಗಿದ್ದ ಬಾಂಬೆ ಟಾಕೀಸಿನ ಸಂಪರ್ಕ ಕಡಿದುಕೊಂಡು ತಮ್ಮ ಪತಿಯೊಡನೆ ಬೆಂಗಳೂರಿನಲ್ಲಿ ವ್ಯವಹಾರಗಳನ್ನು ನಡೆಸಲು ಏರ್ಪಾಟು ಮಾಡಿಕೊಂಡರು.

ರೋರಿಕ್‌ರವರಿಗಿದ್ದ ಸೌಂದರ್ಯಾನುಭೂತಿ ಹಾಗೂ ಕಲಾತ್ಮಕ ದೃಷ್ಟಿಯಿಂದ ತಾಟಗುಣಿ ಎಸ್ಟೇಟಿನ ನಿಸರ್ಗ ಸಂಪತ್ತನ್ನು ಸೌಂದರ್ಯಮಯವಾಗಿ ಕಲಾತ್ಮಕವಾಗಿ ಪರಿವರ್ತನೆ ಮಾಡುವುದರಲ್ಲಿ ಯಶಸ್ವಿಯಾದರು. ಈ ಪರಿವರ್ತನೆಯಲ್ಲಿ ದೇವಿಕಾ ರಾಣಿಯವರ ಪಾತ್ರ ಅತ್ಯಂತ ಗಮನಾರ್ಹವಾದುದು. ಕ್ರಮೇಣ ತಮ್ಮ ಬಂಗಲೆಯ ಪಕ್ಕದಲ್ಲಿ ಇವರ ಕಲಾ ಅಧ್ಯಯನಕ್ಕೆ ಅನುಕೂಲವಾಗುವಂತೆ ಒಂದು ಸುಸಜ್ಜಿತ ಸ್ಟುಡಿಯೋ ನಿರ್ಮಿಸಿಕೊಂಡರು. ರಸ್ತೆಯ ಬದಿಯಲ್ಲಿ ಒಂದು ಅತಿಥಿಗೃಹ ಸಹ ಕಟ್ಟಿಸಿಕೊಂಡರು. ತಾಟಗುಣಿ ಎಸ್ಟೇಟ್‌ನಲ್ಲಿ ಅದುವರೆಗೆ ಬೆಳೆದಿದ್ದ ಲಿನೊಲಾಯ್ ವೃಕ್ಷಗಳು ಫಲಕೊಡುವ ಹಂತಕ್ಕೆ ತಲುಪಿದ್ದವು. ಇದರ ಹಿಂದಿನ ಮಾಲೀಕರಾದ ಮಿ. ಅಂಡರ್ ಸನ್‌ರವರು ಮೆಕ್ಸಿಕೋದಿಂದ

ತಂದ ಲಿನೋಲಾಯ್ ಗಿಡಗಳು ಇಪ್ಪತ್ತೊಂದು ವರ್ಷಗಳ ನಂತರ ಫಲ ಕೊಡುವುದಕ್ಕೆ ಪ್ರಾರಂಭಿಸಿದವು. ಲಿನೋಲಾಯ್ ವೃಕ್ಷದಲ್ಲಿ ಬಿಡುವ ಕಾಯಿಗಳಿಂದ ಸುವಾಸನೆ ಎಣ್ಣೆಯನ್ನು ಪಡೆಯುವ ವಿಧಾನದಲ್ಲಿ ರೋರಿಕ್‌ರವರು ಯಶಸ್ವಿಯಾದರು. ಈ ಶೃಂಗಾರ ಸಾಧನದ ದ್ರವವು ವಿಶ್ವದ ಮಾರುಕಟ್ಟೆಯಲ್ಲಿ ಪ್ರಮುಖ ಆಕರ್ಷಣೀಯ ವಸ್ತುವಾಯಿತು. ಇದರಿಂದ ವರ್ಷದಲ್ಲಿ ಮೂರು ತಿಂಗಳ ಕಾಲ ಸುವಾಸನೆ ದ್ರವವನ್ನು ಭಟ್ಟಿ ಇಳಿಸುವ ಕಾರ್ಯದಲ್ಲಿ ರೋರಿಕ್‌ರವರು ನಿರತರಾಗುವಂತಾಯಿತು. ಸ್ವೆಟಾಸ್ಲಾವ್ ದಂಪತಿಗಳು ವಾರಕ್ಕೆ ಮೂರು ದಿನ ನಗರಕ್ಕೆ ಬಂದು ತಮ್ಮ ಕಛೇರಿಯ ಕಾರ್ಯದಲ್ಲಿ ಮಗ್ನರಾಗುತ್ತಿದ್ದರು. ಮೊದಲಿಗೆ ಇನ್‌ಫೆಂಟ್ರಿ ರಸ್ತೆಯಲ್ಲಿರುವ ಚರ್ಚಿನ ಆವರಣದಲ್ಲಿರುವ ಗೃಹದಲ್ಲಿ ತಮ್ಮ ಕಛೇರಿಯನ್ನು ನಡೆಸುತ್ತಾ ಇದ್ದರು. ನಂತರ ಎಡ್ವರ್ಡ್ ರಸ್ತೆಯ 9ನೇ ನಂಬರ್ ಮನೆಯನ್ನು ವಕೀಲರಾದ ಶ್ರೀ ಶಂಕರ ನಾರಾಯಣರಾವ್‌ರವರಿಂದ ಬಾಡಿಗೆಗೆ ಪಡೆದು ಅಲ್ಲಿ ತಮ್ಮ ಅಂತ್ಯಕಾಲದವರೆಗೂ ಕಛೇರಿ ವ್ಯವಹಾರಗಳನ್ನು ನಡೆಸುತ್ತಿದ್ದರು.

ಸ್ವೆಟಾಸ್ಲಾವ್ ಅವರ ಕಲೆಯ ವಿಶೇಷ ಸೊಬಗು ಎಂದರೆ ಇವರ ವಿಭಿನ್ನವಾದ, ಭಾರತೀಯ ಮತ್ತು ರಷ್ಯನ್ ಕಲಾ ಪರಂಪರೆಗಳ ಸಮ್ಮಿಶ್ರತೆ ಕಲಾಶೈಲಿ. ಮೂಲತಃ ರಷ್ಯಾದೇಶದವರಾಗಿದ್ದರೂ, ಭಾರತ ದೇಶದ ಜನರ ಜೀವನವನ್ನು ಅರ್ಥ ಮಾಡಿಕೊಂಡಿದ್ದರು ಮತ್ತು ಇಲ್ಲಿನ ಜೀವನವನ್ನು ಕಾವ್ಯಾತ್ಮಕವಾಗಿ ಲಯಬದ್ಧವಾಗಿ ಚಿತ್ರಗಳಲ್ಲಿ ಬಿಂಬಿಸಿದರು. ಅಲ್ಲದೆ ಅವರ ಕೃತಿಗಳು ಜನರನ್ನು ನಿರಂತರವಾಗಿ ಆಕರ್ಷಿಸುವ

ವಸ್ತುಗಳಾದುವು. ಅವರ ಚಿತ್ರಗಳು ತೇಜಸ್ಸು, ರಮ್ಯತೆ ಮತ್ತು ವರ್ಣಮಯ ಲಹರಿಗಳಿಂದ ಒಂದರ್ಥದಲ್ಲಿ ಕಾವ್ಯಾತ್ಮಕವಾಗಿರುತ್ತವೆ. ಕೆಲವು ಕೃತಿಗಳು ಮಾನವೀಯತೆ ಆಧ್ಯಾತ್ಮಿಕತೆ, ಪ್ರಕೃತಿ ಸೌಂದರ್ಯ ಮತ್ತು ಮಾನಸಿಕ ಸದ್ಗುಣಗಳ ಪರಿಪೂರ್ಣತೆಯ ಗುಣಾತಿಶಯದಿಂದ ನಮ್ಮನ್ನು ಹೊಸ ಲೋಕಕ್ಕೆ ಕರೆದೊಯ್ಯುತ್ತವೆ. ಈ ಅಪೂರ್ವ ದಂಪತಿಗಳು ಬೆಂಗಳೂರು ಬಳಿ ಇರುವ ನಿಸರ್ಗ ಸೌಂದರ್ಯದ ಬೀಡಾಗಿರುವ ತಾಟಗುಣಿ ತೋಟವನ್ನು ತಮ್ಮ ಅನಿಸಿಕೆಗಳಿಗೆ ಹೊಂದಿಕೊಂಡಂತೆ ಕಲಾತ್ಮಕವಾಗಿ ಶ್ರೀಮಂತಗೊಳಿಸಿದರು. ಅವರ ತೋಟದಲ್ಲಿನ ಐನೂರು ವರ್ಷಗಳಷ್ಟು ಹಳೆಯದಾದ ವಟವೃಕ್ಷ ಹಾಗೂ ಅದರಡಿಯಲ್ಲಿರುವ ಮುನೇಶ್ವರ ದೇವಸ್ಥಾನವನ್ನು ಅತ್ಯಂತ ಭಕ್ತಿ ಮತ್ತು ಶ್ರದ್ಧೆಯಿಂದ ಆಕರ್ಷಣೀಯವಾಗಿ ಪರಿವರ್ತಿಸಿಕೊಂಡರು. ಅವರ ತೋಟಕ್ಕೆ ಭೇಟಿ ಇತ್ತ ಎಲ್ಲಾ ವಿದೇಶಿ ಪ್ರಮುಖರು, ರಾಷ್ಟ್ರದ ನೇತಾರರು ವಟವೃಕ್ಷದ ಸೊಬಗನ್ನು ನೋಡಿ ಪ್ರಶಂಸೆ ಮಾಡಿದ್ದಾರೆ. ನಂತರ ಅವರ ವಾಸದ ಬಂಗಲೆಯ ಸುಮಾರು ನೂರ ಇಪ್ಪತ್ತು ವರ್ಷಗಳಷ್ಟು ಹಳೆಯದಾದ ಈ ಕಟ್ಟಡದ ಸುತ್ತ ವೃಕ್ಷಗಳ ಹಾಗೂ ಆಲಂಕಾರಿಕ ಗಿಡಗಳಿಂದ ವಿಜೃಂಬಿಸುತ್ತಿದ್ದು, ಒಳಗಡೆ ಭಾರತೀಯ ಪರಂಪರೆಯ ರಾಜಸ್ಥಾನಿ, ಕುಲು, ಸಾಂಪ್ರದಾಯಿಕ ಚಿತ್ರಗಳ ಜೊತೆಗೆ ತಮ್ಮ ತಂದೆ ನಿಕೋಲಾಸ್ ರೋರಿಕ್‌ರವರ ಕೃತಿಗಳು ಸದಾ ಗೋಡೆಗಳನ್ನು ಅಲಂಕರಿಸಿವೆ. ಅಲ್ಲದೆ ವಿಶ್ವದ ವಿವಿಧ ಜನಜೀವನವನ್ನು ಪ್ರತಿಬಿಂಬಿಸುವ ಲೋಹದ ಕೃತಿಗಳನ್ನು ಅಚ್ಚುಕಟ್ಟಾಗಿ ಪ್ರದರ್ಶನಕ್ಕೆ ಇಟ್ಟಿರುತ್ತಿದ್ದರು. ನಂತರ ಸಂದರ್ಶಕರು ರೋರಿಕ್‌ರವರ ಬಂಗಲೆಯ

ಪಕ್ಕದಲ್ಲಿ ರಚಿಸಿಕೊಂಡಿದ್ದ ಸ್ಟುಡಿಯೋಗೆ ಭೇಟಿ ನೀಡುವ ಕಾರ್ಯಕ್ರಮ ಏರ್ಪಾಟಗಿರುತ್ತಿತ್ತು. ಸ್ಟುಡಿಯೋದಲ್ಲಿ ತಮ್ಮ ಹಾಗೂ ತಮ್ಮ ತಂದೆಯವರ ಕಲಾಕೃತಿಗಳ ಸಂಗ್ರಹವನ್ನು ಬಹು ಅಚ್ಚುಕಟ್ಟಾಗಿ ಜೋಡಿಸಿದ್ದರು. ಅಲ್ಲದೆ ಟಿಬೆಟ್‌ನ ಟಂಕಾಗಳು, ಲೋಹ ಶಿಲ್ಪಗಳು ಮತ್ತು ದಕ್ಷಿಣ ಭಾರತದ ಪಂಚಲೋಹದ ವಿಗ್ರಹಗಳು ಸ್ಟುಡಿಯೋವನ್ನು ಅಲಂಕರಿಸಿರುತ್ತಿದ್ದವು.

ಅಚ್ಚುಕಟ್ಟಾಗಿ ಗೋಡೆಗೆ ಜೋಡಿಸಿಟ್ಟಿರುತ್ತಿದ್ದ ಅನೇಕ ಕಲಾಕೃತಿಗಳು ಯಾವಾಗಲೂ ಪ್ರೇಕ್ಷಕರ ಮನ ತಣಿಸುತ್ತಿದ್ದವು. ವಿಶ್ವದ ಪ್ರಮುಖ ಕಲಾ ಪ್ರಕಟಣೆಗಳು ಒಂದು ಪಕ್ಕದಲ್ಲಿ ಅಚ್ಚುಕಟ್ಟಾಗಿ ಜೋಡಿಸಿರುತ್ತಿದ್ದವು. ಪೂರ್ವ ಭಾಗದ ಗೋಡೆಯಲ್ಲಿ ತಮ್ಮ ತಂದೆ ಹಾಗೂ ತಾಯಿಯವರ ಭಾವ ಚಿತ್ರದ ಜೊತೆ ಟಾಗೂರ್ ಚಿತ್ರಗಳು ಸದಾ ಪ್ರದರ್ಶನದಲ್ಲಿರುತ್ತಿದ್ದವು. ವಿಶೇಷ ರೀತಿಯಲ್ಲಿ ಅಳವಡಿಸಲಾಗಿದ್ದ ಆಸನಗಳ ಮೇಲೆ ಸಂದರ್ಶಕರು ಕುಳಿತುಕೊಂಡ ನಂತರ ತಮ್ಮ ಕಲಾ ಕೃತಿಗಳನ್ನು ಎದುರುಗಿನ ಮರದ ಸಾಧನದ ಮೇಲೆ ಒಂದೊಂದಾಗಿ ಪ್ರದರ್ಶಿಸಿ ಅದರ ಪ್ರಾಮುಖ್ಯತೆಯನ್ನು ವಿವರಿಸುತ್ತಿದ್ದರು. ಅನಂತರ ಅತಿಥಿಗಳಿಗೆ ಸೂಕ್ತವಾದ ಅತಿಥ್ಯವನ್ನು ನೀಡಿ ಅವರನ್ನು ಬೀಳ್ಕೊಡುತ್ತಿದ್ದರು. ಪೂರ್ವಾನುಮತಿಯಿಲ್ಲದೆ ಯಾರೂ ಅವರನ್ನು ಭೇಟಿ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಪ್ರತಿ ಸಂದರ್ಶಕರಿಗೂ ಶ್ರೀಮತಿ ದೇವಿಕಾ ರಾಣಿಯವರು ಅತ್ಯಂತ ಆದರಣೀಯ ರೀತಿಯಲ್ಲಿ ಆತಿಥ್ಯವನ್ನು ಏರ್ಪಡಿಸುತ್ತಿದ್ದರು. ಅವರ ಸೌಜನ್ಯ ಅನುಕರಣೀಯವೆಂದು ಪ್ರತಿಯೊಬ್ಬ ಸಂದರ್ಶಕರು ಭಾವಿಸಿದ್ದಾರೆ.

ಚಿತ್ರಕಲಾ ಪರಿಷತ್ತಿನ ಕೆಲವು ಸದಸ್ಯರು 1961ರಲ್ಲಿ ರೋರಿಕ್‌ರವರನ್ನು ಸಂದರ್ಶಿಸಿ ಅವರೊಡನೆ ಕಲಾ ಚಟುವಟಿಕೆಗಳಿಗೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸುವುದರಲ್ಲಿ ಯಶಸ್ವಿಯಾದರು. ಅವರ ತೋಟಕ್ಕೆ ಭೇಟಿ ಕೊಡುವ ಕಾರ್ಯಕ್ರಮ ಏರ್ಪಾಟಾಯಿತು. ನನ್ನ ಪರಮ ಮಿತ್ರರಾದ ಎಂ. ಆರ್ಯಮೂರ್ತಿ, ಪಿ.ಆರ್. ತಿಪ್ಪೇಸ್ವಾಮಿ, ಎಂ.ಬಿ. ಬಸವರಾಜು, ಎಸ್.ಜಿ. ಶೇಷಗಿರಿ ಮತ್ತಿತರ ಮಿತ್ರರೊಡನೆ ರೋರಿಕ್‌ರವರ ತೋಟಕ್ಕೆ ಭೇಟಿ ನೀಡಿದೆವು. ನಮ್ಮನ್ನು ಆದರದಿಂದ ಅವರ ಬಂಗಲೆಯ ಬಳಿ ಸ್ವಾಗತಿಸಿದ ರೋರಿಕ್ ದಂಪತಿಗಳು ಪ್ರಥಮವಾಗಿ ನಮ್ಮನ್ನು ವಟ ವೃಕ್ಷದಡಿಯ ಮುನೇಶ್ವರ ದೇವಸ್ಥಾನಕ್ಕೆ ಕರೆದೊಯ್ದರು. ಆ ಸ್ಥಳದ ಮಹಿಮೆಯನ್ನು ವಿವರಿಸಿದ ನಂತರ ಪೂಜೆಯ ಕೈಂಕರ್ಯ ನೆರವೇರಿತು. ನಂತರ ನಮ್ಮನ್ನು ಅವರ ಬಂಗಲೆಯ ಮೊಗಸಾಲೆಗೆ ಕರೆದೊಯ್ದರು. ಅವರ ಕಲಾಕೃತಿಗಳ ಸಂಗ್ರಹದ ಚಿತ್ರಗಳನ್ನು ನೋಡಿ ನಮಗೆ ಮ್ಯೂಸಿಯಂನ ಅನುಭವವಾಯಿತು. ಅಲ್ಲಿಂದ ಅವರ ಸ್ಟುಡಿಯೋಗೆ ಭೇಟಿ ನೀಡಿದೆವು. ಅವರ ಸ್ಟುಡಿಯೋದಲ್ಲಿನ ಅಚ್ಚುಕಟ್ಟು, ಸ್ವಚ್ಛತೆ ಮತ್ತು ವ್ಯವಸ್ಥಿತವಾಗಿ ಜೋಡಿಸಲಾಗಿದ್ದ ಸಂಗ್ರಹದ ಕಲಾ ಕೃತಿಗಳು ರೋರಿಕ್ ಮತ್ತು ಅವರ ತಂದೆಯವರ ಕೃತಿಗಳು ಒಂದಾದ ನಂತರ ಪ್ರತ್ಯೇಕವಾಗಿ ಪ್ರದರ್ಶಿಸಿ ನಮ್ಮ ಕಣ್ಮನಗಳನ್ನು ತಣಿಸಿ ಶ್ರೀಮಂತಗೊಳಿಸಿದರು. ಇದರಿಂದ ಅಂದು ನಮಗೆಲ್ಲಾ ರೋರಿಕ್ ದಂಪತಿಗಳಲ್ಲಿ ಗೌರವ ಇಮ್ಮಡಿಸಿ ನಿಕಟ ಬಾಂದವ್ಯವನ್ನು ಮುಂದುವರೆಸುವುದಕ್ಕೆ ದಾರಿಯಾಯಿತು. ಅವರ

ತೋಟದ ವಿವಿಧ ಭಾಗಗಳನ್ನು ನೋಡುವ ಅವಕಾಶ ಸಹ ಅಂದು ನಮಗೆ ದೊರಕಿತು. ತೋಟದ ಮಧ್ಯದಲ್ಲಿರುವ ಪುಟ್ಟ ಜಲಾಶಯ, ನಿಸರ್ಗ ರಮಣೀಯವಾಗಿತ್ತು. ಒಂದು ಕಿಲೋಮೀಟರ್ ಮುಂದೆ ಹೋದರೆ ಎತ್ತರದ ದಿಬ್ಬ, ನೋಟಕ್ಕಾಗಿ ಸಜ್ಜುಗೊಳಿಸಿದ್ದ ಶಿಲಾಸನಗಳು ಶಾಂತಿಯನ್ನು ಅರಸಿ ಬರುವವರಿಗೆ ಸ್ವರ್ಗದೋಪಾದಿಯಲ್ಲಿತ್ತು. ಅಲ್ಲಿಂದ ಪೂರ್ವದತ್ತ ಕಾಣುವ ಗುಡ್ಡಗಳ ಸಾಲು, ಹಸಿರು ಆವರಿಸಿರುವ ಕಣಿವೆ ದೃಶ್ಯ ಮನಮೋಹಕವಾಗಿತ್ತು.

ಅನಂತರ ಅವರ ಆತ್ಮೀಯ ಆತಿಥ್ಯವನ್ನು ಸ್ವೀಕರಿಸಿ ಬೆಂಗಳೂರಿಗೆ ವಾಪಸ್ಸು ಬಂದಾಗ ಹೊಸ ಲೋಕದ ಅನುಭವ ನಮಗಾಗಿತ್ತು.

ಸ್ವೆಟಾಸ್ಲಾವ್ ರೋರಿಕ್‌ರವರಿಗೆ ಭಾರತದ ಮೇಲೆ ಅಭಿಮಾನ ಮೂಡಲು ಅವರ ತಂದೆಯವರೇ ಸ್ಫೂರ್ತಿಯೆಂದರೆ ತಪ್ಪಾಗಲಾರದು. ಇಪ್ಪತ್ತನೆಯ ಶತಮಾನದ ಆದಿಯಲ್ಲಿ ವಿಶ್ವದಲ್ಲಿ ಜರುಗಿದ ರಾಜಕೀಯ ತುಮುಲ ಹಾಗೂ ಬದಲಾವಣೆಗಳ ಹಿನ್ನೆಲೆ ಮತ್ತು ತಮಗಿದ್ದ ಆಧ್ಯಾತ್ಮಿಕ ಮೌಲ್ಯಗಳ ಪ್ರಭಾವದಿಂದ ಪ್ರೊ. ನಿಕೋಲಾಸ್ ರೋರಿಕ್‌ರವರು ಭಾರತಕ್ಕೆ ಬಂದು ನೆಲಸುವ ಬಗ್ಗೆ ತಮ್ಮ ನಿರ್ಧಾರಗಳನ್ನು ಕೈಗೊಂಡಿರಬಹುದು. ಇದರಲ್ಲಿ ಒಂದು ಮುಖ್ಯ ಅಂಶವನ್ನು ಡಾ. ಸ್ವೆಟಾಸ್ಲಾವ್‌ರವರು ಅನೇಕ ಬಾರಿ ವ್ಯಕ್ತಪಡಿಸುತ್ತ ತಮ್ಮ ಹೆಸರಿನ ಮೂಲವನ್ನು ವಿವರಿಸುತ್ತಿದ್ದರು. ಹಿಮಾಲಯ ಪರ್ವತದ ಸ್ಥಿತಿ ಕಣಿವೆಯಲ್ಲಿ ಪ್ರಸ್ತುತವಿರುವ ಪುರಾಣ ಕಥೆಗಳ ಆಧಾರದ ಮೇಲೆ ಶ್ವೇತಸ್ರವ ಒಬ್ಬ ಮಹಾನ್ ಋಷಿ. ಶಿಷ್ಯರಿಗೆ ಈ ಮಹಾನ್ ಯತಿಗಳು

ಮಾರ್ಗ ದರ್ಶಕರು. ನಿಕೋಲಾಸ್ ರೋರಿಕ್‌ರವರು ಈ ಋಷಿಯ ಹೆಸರನ್ನು ಮಗನಿಗೆ ಕೊಟ್ಟಿದ್ದಾರೆಂದು ಅದರ ರಷ್ಯನ್ ಭಾಷೆಯ ರೂಪವೇ ಸ್ವೆಟಾಸ್ಲಾವ್ ಎಂದು ಹೇಳುತ್ತಿದ್ದರು.

ಡಾ. ಸ್ವೆಟಾಸ್ಲಾವ್ ರೋರಿಕ್‌ರವರು ರಷ್ಯಾದ ಸೆಂಟ್ ಪೀಟರ್ ಬರ್ಗನಲ್ಲಿ 1904ನೇ ಅಕ್ಟೋಬರ್ 23ರಂದು ನಿಕೋಲಾಸ್‌ರವರ ಎರಡನೆ ಮಗನಾಗಿ ಜನ್ಮ ತಾಳಿದರು. ಇದಕ್ಕೆ ಮುಂಚೆ 1902ರಲ್ಲಿ ಜನಿಸಿದ್ದ ನಿಕೋಲಾಸ್‌ರವರ ಪ್ರಥಮ ಪುತ್ರ ಜಾರ್ಜ್‌ರವರು ಯೂರೋಪ್ ಮತ್ತಿತರ ದೇಶಗಳಲ್ಲಿ ಮಾನವ ಶಾಸ್ತ್ರದ ಅಧ್ಯಯನ ಮಾಡಿದ ನಂತರ, ಭಾರತೀಯ ಹಾಗೂ ಟಿಬೆಟ್ ಸಂಸ್ಕೃತಿಗಳ ಬಗ್ಗೆ ತಮ್ಮ ಪಾಂಡಿತ್ಯವನ್ನು ಗಳಿಸಿದರು. ರೋರಿಕ್ ವಂಶ ರಷ್ಯಾದ ಪರಂಪರಾಗತ ಶ್ರೀಮಂತ ಕುಟುಂಬಕ್ಕೆ ಸೇರಿದೆ. ಇವರು ರಷ್ಯಾದ ಚಕ್ರವರ್ತಿಗಳ ನಿಕಟ ಬಂಧುಗಳೂ ಆಗಿದ್ದರು. ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಜರುಗಿದ ರಷ್ಯಾದ ಕ್ರಾಂತಿ ಇವರ ಕುಟುಂಬದ ಮೇಲೆ ಸ್ವಲ್ಪ ಪ್ರತಿಕೂಲ ಪರಿಣಾಮ ಬೀರಿತು. ಆದರೂ ನಿಕೋಲಾಸ್ ರೋರಿಕ್‌ರವರ ಧೀಮಂತ ವ್ಯಕ್ತಿತ್ವ ಮತ್ತು ಸಾಂಸ್ಕೃತಿಕ ಪ್ರಭಾವದಿಂದ ಅವರು ಹಾಗೂ ಅವರ ಕುಟುಂಬ ವರ್ಗದವರು ಬದುಕುಳಿಯುವುದರಲ್ಲಿ ಯಶಸ್ವಿಯಾದರು. ಇವರ ತಂದೆಯವರ ನಿರಂತರ ಅಧ್ಯಯನ, ಸಂಶೋಧನೆ ಮತ್ತು ಅಧ್ಯಯನ ಪ್ರವಾಸಗಳು ಮಕ್ಕಳ ಮೇಲೆ ಅತೀವ ಪ್ರಭಾವ ಬೀರಿತು. ರೋರಿಕ್ ವಂಶಜರು ಐಸ್‌ಲ್ಯಾಂಡ್‌ನ ಮತ್ತು ಯುಟ್ಲಾಂಡ್ ವಂಶಸ್ಥರು ನಿಕೋಲಾಸ್‌ರವರ ಅಜ್ಜ ಫೈಡರ್ ಇವಾನೋವಿಚ್‌ರವರು

ನೂರ ಐದು ವರ್ಷ ಬದುಕಿದ್ದರು. ರೋರಿಕ್ ಕುಟುಂಬಗಳು ರಷ್ಯಾದ ಜಾರ್ ಚಕ್ರವರ್ತಿಗಳ ಮೇಲೆ ಅಪಾರ ಪ್ರಭಾವವನ್ನು ಗಳಿಸಿಕೊಂಡಿದ್ದರು. ನಿಕೋಲಾಸ್ ರೋರಿಕ್‌ರವರು 1874ರಲ್ಲಿ ಜನಿಸಿ1947ರವರೆಗೆ ಜೀವಿಸಿದ್ದರು. ಇವರ ಧರ್ಮಪತ್ನಿ ಹೆಲೇನಾ ಇವನೋತ್ನಾ ಪಮೋಶ್ನಿಕೋವಾರವರ ಧಾರ್ಮಿಕ ಮನೋಭಾವನೆಗಳಿಂದ ತಮ್ಮ ಜೀವನವನ್ನು ಅತ್ಯಂತ ಶಿಸ್ತಿನಿಂದ ನಡೆಸಿಕೊಂಡು ಪತಿಯೊಡನೆ ಸದಾ ಅವರ ಕಾರ್ಯಗಳಲ್ಲಿ ಸಹಕಾರಿಯಾಗಿದ್ದರು. ತಮ್ಮ ಪತಿಯೊಡನೆ ಮಂಗೋಲಿಯಾ, ಅಲ್ಟಯ್ ಹಿಮಾಲಯ, ಟಿಬೆಟ್, ಚೀನಾ ಹಾಗೂ ನೇಪಾಳದಲ್ಲಿ ಅಧ್ಯಯನ ಸಂಚಾರ ಕೈಗೊಂಡ ನಂತರ ಭಾರತದ ಹಿಮಾಲಯದ ತಪ್ಪಲಿನಲ್ಲಿ ಕುಲು ಕಣಿವೆಯ ಬಳಿ ತಮ್ಮ ವಾಸ್ತವ್ಯವನ್ನು ಹೂಡಿದರು. ಬ್ರಿಟಿಷರ ಕಾಲದಲ್ಲಿ ಅವರಿಗೆ ಶತ್ರುವೆಂದು ಪರಿಗಣಿಸಿದ್ದ ರಷ್ಯಾದ ಸಂಜಾತರಾದ ರೋರಿಕ್‌ರವರಿಗೆ ಭಾರತದಲ್ಲಿ ವಾಸಿಸಲು ಪರವಾನಗಿ ಸಿಕ್ಕಿದ್ದು ಅತ್ಯಂತ ಕುತೂಹಲಕಾರಿ ಪ್ರಸಂಗ. ಹಿಮಾಚಲ ಪ್ರದೇಶದ ಕುಲು ಕಣಿವೆಯಲ್ಲಿ ಬಂಗಲೆಯನ್ನು ನಿರ್ಮಿಸಿಕೊಂಡು ಒಂದು ತೋಟವನ್ನು ಪೋಷಿಸಿ ಬೆಳೆಸಿಕೊಂಡರು. ಇಂದಿಗೂ ಇದು ರೋರಿಕ್ ಎಸ್ಟೇಟ್ ಎಂದು ಪ್ರಸಿದ್ಧಿಯಾಗಿದೆ. ಈ ಬಂಗಲೆಯಲ್ಲಿ ಈಗಲೂ ಅವರ ಕಲಾಕೃತಿಗಳು, ಅಪರೂಪದ ಪಂಚ ಲೋಹದ ಕೃತಿಗಳು ಹಾಗೂ ಹಿಮಾಲಯದ ಔಷಧ ಮೂಲಿಕೆಗಳು ಮತ್ತಿತರ ಖನಿಜದ ಅಮೂಲ್ಯ ಸಂಗ್ರಹಗಳು ಕಾಪಾಡಲ್ಪಟ್ಟಿವೆ. ನಿಕೋಲಾಸ್ ರೋರಿಕ್‌ರವರ ಅತ್ಯಂತ ಕ್ಲಿಷ್ಟಕರವಾದ ಮಧ್ಯ ಏಷಿಯಾದ

ಅಧ್ಯಯನ ಪ್ರವಾಸದ ಪ್ರತಿ ಮಜಲುಗಳು ವಿಸ್ಮಯ ತರುವ ವಿಷಯಗಳಾಗಿವೆ. ಇಂತಹ ಮಹಾನ್ ಪುರುಷನ ಮಗನಾಗಿ ಸ್ವೆಟಾಸ್ಲಾವ್ ರೋರಿಕ್‌ರವರು ಭಾರತದಲ್ಲಿ ವಾಸ ಮಾಡಿಕೊಂಡು ಕಲಾವಿದರಾಗಿ ವಿಜೃಂಬಿಸಿದುದು ಶ್ಲಾಘನೀಯ ವಿಷಯ.

ರೋರಿಕ್ ಅವರು ಚಿತ್ರ ರಚಿಸುವುದರಲ್ಲಿ ಗಳಿಸಿದ ಯಶಸ್ಸು ಹೆಚ್ಚಿನ ಅಂಶ ಇವರ ಸ್ವಪ್ರತಿಭೆಯಷ್ಟೆ ಅಲ್ಲದೆ ಅವರ ವಂಶದ ಸಾಂಸ್ಕೃತಿಕ ಶ್ರೀಮಂತ ಹಿನ್ನೆಲೆಯಿಂದ ಸಾಧ್ಯವಾಯಿತು. ವಾಸ್ತವವಾಗಿ, ಇವರ ತಂದೆ ತಾಯಿಯರು ಮಕ್ಕಳಿಗೆ ರಚನಾತ್ಮಕ ಮತ್ತು ವೈಜ್ಞಾನಿಕ ವಿಚಾರಗಳತ್ತ ಗಮನ ಕೊಡಲು ಹಾರೈಸಿದ್ದರು. ಸ್ವೆಟಾಸ್ಲಾವ್ ಮತ್ತು ಅವರ ಸೋದರ, ಭಾವಚಿತ್ರ, ಪ್ರಕೃತಿ ಚಿತ್ರಗಳನ್ನು ರಚಿಸುತ್ತಿದ್ದರು ಮತ್ತು ನೆದರ್‌ಲ್ಯಾಂಡ್, ಪ್ಲೆಮಿಷ್ ಶೈಲಿಯ ಕೃತಿಗಳನ್ನು ಪ್ರತಿಕೃತಿ ಮಾಡುತ್ತಿದ್ದರು. ಅಲ್ಲದೇ ಪ್ರಸಿದ್ಧ ನಾಟಕಕಾರ ಕೃತಿಗಳನ್ನು ಆರಿಸಿ ಅಭಿನಯಿಸುತ್ತಿದ್ದ ನಾಟಕಗಳಿಗೆ ದೃಶ್ಯ ಹಿನ್ನೆಲೆ ಪರದೆಗಳನ್ನು ಹಾಗೂ ಉಡುಪುಗಳನ್ನು ಸಿದ್ಧಗೊಳಿಸುತ್ತಿದ್ದರು. ಇದರ ಜೊತೆಗೆ ಇವರ ತಂದೆ ಕೆಲವು ಪೂರಕ ಕೆಲಸಗಳಲ್ಲಿ ಸಹಾಯ ಮಾಡುವುದನ್ನು ಮಕ್ಕಳಿಗೆ ವಹಿಸಿಕೊಡುತ್ತಿದ್ದರು. ಹೀಗೆ ಇಬ್ಬರು ಸೋದರರು ಸಿದ್ಧಪಡಿಸುತ್ತಿದ್ದ ರಂಗಚಿತ್ರಗಳು ನಿಕೋಲಾಸ್ ರೋರಿಕ್‌ರ ರಚನಾತ್ಮಕ ಕಲೆಯ ಕೊಡುಗೆಗೆ ಸಹಕಾರಿಯಾಗಿದ್ದಿತು. ಇಬ್ಬರೂ ಸೋದರರು ಸ್ವಂತ ಮಾರ್ಗದತ್ತ ನಡೆದು, ಸ್ವೆಟಾಸ್ಲಾವ್ ರೋರಿಕ್ ಕಲಾವಿದರಾದರು ಮತ್ತು ಯೂರಿ ರೋರಿಕ್ ಪೌರಸ್ತ್ಯ ಭಾಷಾ ಸಾಹಿತ್ಯಗಳ ಮತ್ತು ಬಹು ಭಾಷಾ ಪಂಡಿತರೆಸಿಕೊಂಡರು.

ಸ್ವೆಟಾಸ್ಲಾವ್ ರೋರಿಕ್‌ರವರು 1917ರವರೆಗೆ ಸ್ವೀಡನ್‌ನಲ್ಲಿ ಶಿಕ್ಷಣ ಪಡೆದರು. ನಂತರ ಎರಡು ವರ್ಷಗಳ ಕಾಲ ಲಂಡನ್ನಿನಲ್ಲಿ ತಮ್ಮ ಶಿಕ್ಷಣವನ್ನು ಮುಂದುವರೆಸಿದರು. ಇದಾದ ನಂತರ 1920ರಲ್ಲಿ ಅಮೇರಿಕಾ ಸಂಯುಕ್ತ ಸಂಸ್ಥಾನದ ಕೊಲಂಬಿಯ ವಿಶ್ವವಿದ್ಯಾಲಯದಲ್ಲಿ ಹಾಗೂ ಹಾರ್ವಡ್ ವಿಶ್ವವಿದ್ಯಾಲಯದಿಂದ ಪದವಿ ಗಳಿಸಿಕೊಂಡರು. ತಮ್ಮ ಶಿಕ್ಷಣದ ಅವಧಿಯಲ್ಲಿ ಕಲೆಯ ಬಗ್ಗೆ ಆಸಕ್ತಿಯನ್ನು ಬೆಳೆಸಿಕೊಂಡು ನಿರಂತರವಾಗಿ ಕ್ರಿಯಾಶೀಲರಾಗಿದ್ದರು. ಅಮೇರಿಕಾದಲ್ಲಿ 1923ರಲ್ಲಿ ತಮ್ಮ ಏಕವ್ಯಕ್ತಿ ಕಲಾಪ್ರದರ್ಶನವನ್ನು ಏರ್ಪಡಿಸಿ ಕಲಾ ವಿಮರ್ಶಕರ ಹಾಗೂ ಕಲಾಭಿಮಾನಿಗಳ ಗಮನವನ್ನು ಸೆಳೆದರು. ಅವರ ಕಲಾಕೃತಿಗಳ ಬಗೆಗೆ ಉತ್ತಮ ವಿಮರ್ಶೆಗಳು ಪ್ರಕಟವಾದದ್ದು ತಮ್ಮ ಕಲಾರಾಧನೆಯ ಭವಿಷ್ಯದ ಬಗ್ಗೆ ಅವರಿಗೆ ಭರವಸೆ ಮೂಡಿತು.

1926ರಲ್ಲಿ ಫಿಲಡೆಲ್ಫಿಯಲ್ಲಿ ಜರುಗಿದ ಕಲಾ ಪ್ರದರ್ಶನದಲ್ಲಿ ಬಹುಮಾನ ದೊರೆತಿದ್ದು ವಿಶ್ವದ ಅನೇಕ ಕಲಾ ಸಂಗ್ರಹಾಲಯಗಳಿಗೆ ಇವರ ಕೃತಿಗಳಲ್ಲಿ ಆಸಕ್ತಿ ಮೂಡುವಂತೆ ಮಾಡಿತು. ಆಗ ಇವರಿಗೆ ಕೇವಲ 22ವರ್ಷ ವಯಸ್ಸು. 1930ರಲ್ಲಿ ವೆನಿಸ್ ನಗರದಲ್ಲಿ ಏರ್ಪಾಟಾಗಿದ್ದ ಕಲಾ ಪ್ರದರ್ಶನದಲ್ಲಿ ಪ್ರದರ್ಶಿತವಾಗಿದ್ದ ಅವರ ತಂದೆಯವರ ಭಾವಚಿತ್ರಕ್ಕೆ ವಿಶೇಷ ಮನ್ನಣೆ ದೊರೆಯಿತು.

1932ರಲ್ಲಿ ನ್ಯೂಯಾರ್ಕ್ ನಗರದಲ್ಲಿ ನಡೆದ ಕಲಾ ಪ್ರದರ್ಶನದಲ್ಲಿ ರೋರಿಕ್‌ರವರ ಭಾವಚಿತ್ರ ಕೃತಿಗಳನ್ನು ಪ್ರದರ್ಶಿಸಿದ್ದಾಗ ಅವುಗಳಿಗೆ ವಿಶ್ವ ಮಾನ್ಯತೆ ದೊರಕಿತು. ಸ್ವೆಟಾಸ್ಲಾವ್ ರೋರಿಕ್‌ರವರನ್ನು

ವಿಶ್ವದ ಪ್ರಮುಖ ಭಾವಚಿತ್ರ ಕಲಾವಿದರಾಗಿ ಪರಿಗಣಿಸಲಾಯಿತು. 1936ರಲ್ಲಿ ಲಕ್ಸ್‌ಂಬರ್ಗ್ ಮ್ಯೂಜಿಯಂಗಾಗಿ ಇವರ ತಂದೆ ನಿಕೋಲಾಸ್ ರೋರಿಕ್‌ರವರ ಭಾವಚಿತ್ರವನ್ನು ಕೊಂಡರು ಇದರಿಂದ ಪ್ರಪಂಚದ ಕಲಾ ಗ್ಯಾಲರಿಗಳಿಗಾಗಿ ಸ್ವೆಟಾಸ್ಲಾವ್ ರೋರಿಕ್‌ರವರ ಕೃತಿಗಳ ಸೇರ್ಪಡೆಯಾಗಲು ಪ್ರಾರಂಭವಾಯಿತು. ಪ್ರಮುಖ ಪತ್ರಿಕೆಗಳಲ್ಲಿ ಇವರ ಕಲಾ ಪ್ರೌಢಿಮೆಯ ಬಗ್ಗೆ ವಿಶೇಷ ಲೇಖನಗಳು ಪ್ರಕಟವಾದವು. 1937ರವರೆಗೆ ವಿಶ್ವದ ಪ್ರಮುಖ ಸಾಂಸ್ಕೃತಿಕ ಸಂಸ್ಥೆಗಳಲ್ಲಿ ಸ್ವೆಟಾಸ್ಲಾವ್‌ರವರಿಗೆ ಸದಸ್ಯತ್ವ ಕೊಟ್ಟು ಇವರನ್ನು ಸಾಂಸ್ಕೃತಿಕ ಮುತ್ಸದ್ದಿಯಾಗಿ ಪರಿಗಣಿಸಿತು. ಅನೇಕ ಸಂಸ್ಥೆಗಳಿಗೆ ಇವರನ್ನು ಗೌರವ ನಿರ್ದೇಶಕರಾಗಿ ಹಾಗೂ ಪ್ರಾಧ್ಯಾಪಕರಾಗಿ ಆಯ್ಕೆ ಮಾಡಲಾಯಿತು.

ಸ್ವೆಟಾಸ್ಲಾವ್‌ರವರ ವಿಶ್ವ ಭ್ರಾತೃತ್ವದ ಹಿನ್ನೆಲೆಯಲ್ಲಿ ಅವರ ತಂದೆ ನಿಕೋಲಾಸ್‌ರವರಿಂದ ಪ್ರೇರಿತವಾದ "ರೋರಿಕ್ ಪ್ಯಾಕ್ಟ್" ಬಹುತೇಕ ರಾಷ್ಟ್ರಗಳ ಒಪ್ಪಿಗೆ ಪಡೆದದ್ದರಿಂದ ಅಂತರಾಷ್ಟ್ರೀಯ ಕ್ಷೇತ್ರದಲ್ಲಿ ಕಲೆ ಹಾಗೂ ವಿಜ್ಞಾನ ಸಂರಕ್ಷಣ ಕೇಂದ್ರಗಳನ್ನು ಕಾಪಾಡುವ ದಿಶೆಯಲ್ಲಿ ಚಾರಿತ್ರಿಕ ಒಪ್ಪಂದಕ್ಕೆ ಅನೇಕ ರಾಷ್ಟ್ರಗಳ ಅಧಿಕೃತ ಪ್ರತಿನಿಧಿಗಳು ಒಪ್ಪಿ ಸಹಿ ಹಾಕಿದರು. ಇದರಲ್ಲಿ ರೋರಿಕ್‌ರವರು ವಹಿಸಿದ ಪಾತ್ರ ಅದ್ವಿತೀಯವಾದುದು.

ಮೂವತ್ತರ ದಶಕದಲ್ಲಿ ಅವರು ಚಿತ್ರಗಳನ್ನು ರಚಿಸುವುದರಲ್ಲಿ ಪೂರ್ಣವಾಗಿ ತೊಡಗಿ, ಹಲವು ವ್ಯಕ್ತಿ ಚಿತ್ರಗಳನ್ನು ಹಾಗೂ ಹಿಮಾಲಯದ ಕುಲು ಕಣಿವೆಯ ಪ್ರಕೃತಿ ದೃಶ್ಯಗಳ ಕೃತಿಗಳನ್ನು ರಚಿಸಿದರು.

ಸ್ವೆಟಾಸ್ಲಾವ್‌ರವರು ತಮ್ಮದೆ ಆದ ಮತ್ತು ವರ್ಣಚಿತ್ರ ಕಲೆಯ ವೈವಿಧ್ಯ ಶೈಲಿಯಲ್ಲಿ ಪರಿಪೂರ್ಣವಾಗಿ, ಸ್ವತಂತ್ರವಾಗಿ ನಡೆದಿದ್ದರು. 1937ರಲ್ಲಿ ಭಾರತದಲ್ಲಿ ಪ್ರಥಮ ಬಾರಿಗೆ ಸ್ವೆಟಾಸ್ಲಾವ್ ರೋರಿಕ್‌ರವರ ಕಲಾಕೃತಿಗಳ ಪ್ರದರ್ಶನವನ್ನು ಲಕ್ನೋ ನಗರದಲ್ಲಿ ಏರ್ಪಾಟು ಮಾಡಲಾಯಿತು. ನಂತರ ಈ ಕಲಾ ಪ್ರದರ್ಶನವನ್ನು ರಾಷ್ಟ್ರದ ಇತರ ನಗರಗಳಲ್ಲಿ ಹಾಗೂ ಕಲಾ ಕೇಂದ್ರಗಳಲ್ಲಿ ಏರ್ಪಾಟು ಮಾಡಲಾಯಿತು. ಇವರ ಕೃತಿಗಳ ಬಗ್ಗೆ ವಿಮರ್ಶಕರಿಂದ ಉತ್ತಮ ಲೇಖನಗಳು ಪ್ರಕಟವಾದುವು.

1938ರಿಂದ ಸುಮಾರು ಐದು ವರ್ಷಗಳ ಕಾಲ ತಮ್ಮ ತಂದೆಯವರ ಸಂಶೋಧನಾ ಕಾರ್ಯದಲ್ಲಿ ನೆರವಾಗಿ ಹಿಮಾಲಯ ಹಾಗೂ ಇತರ ಅಮೂಲ್ಯ ಕ್ಷೇತ್ರಗಳ ಔಷಧ ಮೂಲಿಕೆಗಳನ್ನು ಸಂಗ್ರಹಿಸಿ ಅದರ ಬಗ್ಗೆ ದೀರ್ಘವಾದ ವರದಿಯನ್ನು ಸಿದ್ಧಪಡಿಸಿ ವೈದ್ಯಕೀಯ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದರು.

ಸ್ವೆಟಾಸ್ಲಾವ್‌ರವರು ತಮ್ಮ ಸ್ನೇಹಪರತೆಯಿಂದ ಭಾರತದ ಅನೇಕ ಗಣ್ಯರ ನಿಕಟ ಭಾಂದವ್ಯವನ್ನು ಗಳಿಸಿಕೊಂಡರು. ಇದರ ಪರಿಣಾಮವಾಗಿ 1945ರಲ್ಲಿ ರಾಷ್ಟ್ರದ ಬೆಳ್ಳಿ ತೆರೆಯ ಪ್ರಥಮ ತಾರೆ ಶ್ರೀಮತಿ ದೇವಿಕಾ ರಾಣಿಯವರೊಡನೆ ವಿವಾಹ ನೆರವೇರಿತು. ಆದರಿಂದ ರೋರಿಕ್‌ರವರು ನಾಡಿನ ಸಾಂಸ್ಕೃತಿಕ ತಂತುವಿನೊಡನೆ ಹಾಗೂ ರಾಷ್ಟ್ರೀಯ ಭಾವನೆಗಳ ಮುಖ್ಯವಾಹಿನಿಯೊಡನೆ ಬೆರೆತುಕೊಂಡರು. 1946 ರಿಂದ 56ರ ವರೆಗೆ ಭಾರತದ ವಿವಿಧ ಭಾಗಗಳಿಗೆ ಅಧ್ಯಯನ ಭೇಟಿ ಇತ್ತು ಜನಜೀವನದ ಮುಖ್ಯ ಅಂಶಗಳನ್ನು ಹಾಗೂ ಸಾಂಸ್ಕೃತಿಕ ಪರಂಪರೆಯ ವಿವಿಧ ಮುಖಗಳನ್ನು

ಪರಿಚಯಿಸಿಕೊಂಡರು.

ಈ ಸಮಯದಲ್ಲಿ ಅನೇಕ ರಾಷ್ಟ್ರ ನಾಯಕರ ಭಾವಚಿತ್ರಗಳನ್ನು ರಚಿಸಿದರು. ಪಂಡಿತ್ ನೆಹರೂರವರು ತಮ್ಮ ಕುಟುಂಬ ವರ್ಗದವರೊಡನೆ ಆಗಾಗ್ಗೆ ಕುಲು ಕಣಿವೆಗೆ ಭೇಟಿ ಕೊಡುತ್ತಿದ್ದರು. 1945ರಲ್ಲಿ ಅವರ ಭೇಟಿಯ ಸದುಪಯೋಗ ಪಡಿಸಿಕೊಂಡು ನೆಹರೂರವರ ಭಾವಚಿತ್ರಗಳನ್ನು ಅನೇಕ ಭಂಗಿಗಳಲ್ಲಿ ಸೆರೆಹಿಡಿದರು. ಅಲ್ಲದೆ ಬಿಕನೀರ್, ಪಾಟಿಯಾಲ, ದಿಕ್ಪತೀಯ ಮಹಾರಾಜ, ಜೇಮ್ಸ್ ಕಸಿನ್ಸ್ ಮತ್ತು ಪರ್ಸಿ ಬ್ರೌನ್‌ರವರ ಭಾವಚಿತ್ರಗಳನ್ನು ರಚಿಸಿ ಅವರ ಪ್ರಶಂಸೆಗೆ ಪಾತ್ರರಾದರು.

ಹಿಮಾಲಯ, ರಾಜಾಸ್ಥಾನ, ಗುಜರಾತ್ ರಾಜ್ಯಗಳ ನಿಸರ್ಗ ದೃಶ್ಯಗಳ ಕೃತಿಗಳು ಸಹ ಈ ಅವಧಿಯಲ್ಲಿ ರಚಿತವಾದವು. ದಕ್ಷಿಣ ಭಾರತದ ಅನೇಕ ಜನಜೀವನವನ್ನು ಕುರಿತಾದ ಚಿತ್ರಗಳು ಸಹ ಮೂಡಿಬಂದವು. ಕೇರಳದ ಜೀವನ ಕ್ರಮದ ಅನೇಕ ಸುಂದರ ಸಂಯೋಜನಾ ಚಿತ್ರಗಳು ಅತ್ಯಂತ ಭಾವನಾಮಯವಾಗಿ ಚಿತ್ರೀಕೃತವಾದವು.

ಪಂಡಿತ್ ನೆಹರೂರವರ ಆಹ್ವಾನದ ಮೇಲೆ ದೆಹಲಿಯಲ್ಲಿ 1960ರಲ್ಲಿ ರೋರಿಕ್‌ರವರ ಕಲಾಕೃತಿಗಳ ಪ್ರದರ್ಶನ ಏರ್ಪಾಟಾಯಿತು. ಈ ಪ್ರದರ್ಶನವು ಅತ್ಯಂತ ಯಶಸ್ವಿಯಾಗಿ ನಡೆಯಿತು. ಅನೇಕ ರಾಷ್ಟ್ರ ನಾಯಕರು ಈ ಪ್ರದರ್ಶನವನ್ನು ವೀಕ್ಷಿಸಿದರು. ಈ ಪ್ರದರ್ಶನದಲ್ಲಿ ದೇವಿಕಾ ರಾಣಿಯವರ ವಿವಿಧ ಭಂಗಿಯ ಭಾವಚಿತ್ರಗಳು ಆಕರ್ಷಣೀಯ ಕೃತಿಗಳಾಗಿದ್ದವು. ನೃತ್ಯಗಾತಿ ರೋಷನ್ ವಜಿಫ್‌ದಾರ್, ರಷ್ಯನ್ ಸಂಜಾತ ರೋಯ ಮಾಗ್ನೊನೊವ, ಹಿಂದಿನ ಪಾಕಿಸ್ಥಾನದ ಆರ್ಥಿಕ ಸಚಿವರಾಗಿದ್ದ

ಮಿ. ಆಸ್ಕಲ್ ಖಾದಿರಿಯವರ ಪತ್ನಿಯ ಭಾವಚಿತ್ರಗಳು ಅತ್ಯಂತ ಜನಪ್ರಿಯತೆ ಗಳಿಸಿದವು. ಆಗಿನ ರಾಷ್ಟ್ರಪತಿಗಳಾಗಿದ್ದ ಡಾ. ರಾಧಾಕೃಷ್ಣನ್‌ರವರು ಅಖಿಲ ಭಾರತ ಕಲಾ ಮತ್ತು ಕುಶಲಕಲೆ ಸಂಘದ ಗ್ಯಾಲರಿಯಲ್ಲಿ ಜರುಗಿದ ರೋರಿಕ್‌ರವರ ಕಲಾ ಪ್ರದರ್ಶನಕ್ಕೆ ಭೇಟಿ ಇತ್ತು ತಮ್ಮ ಮುಕ್ತ ಪ್ರಶಂಸೆ ವ್ಯಕ್ತಪಡಿಸಿದರು. ನಂತರ ಈ ಪ್ರದರ್ಶನವನ್ನು ಆಗಿನ ರಷ್ಯಾದ ಪ್ರಧಾನಿಯವರ ಆಹ್ವಾನದ ಮೇಲೆ ಮಾಸ್ಕೊ ನಗರಕ್ಕೆ ಕೊಂಡೊಯ್ಯಲಾಯಿತು. ಇದರಿಂದ ರಷ್ಯಾ ಹಾಗೂ ಭಾರತದ ಭಾಂದವ್ಯ ಸಾಂಸ್ಕೃತಿಕ ಕ್ಷೇತ್ರದ ಮೂಲಕ ಹೆಚ್ಚಿನ ರೀತಿಯಲ್ಲಿ ವೃದ್ಧಿಯಾಯಿತು. ಲೆನಿನ್‌ಗ್ರಾಡ್‌ನ ಹೆರ್ಮಿಟಾಜ್ ಮ್ಯೂಜಿಯಂ ರೋರಿಕ್‌ರವರ ಇಪ್ಪತ್ತು ಕೃತಿಗಳನ್ನು ಅಳವಡಿಸಿ ಮುಖ್ಯ ಪ್ರಕಟನೆಯನ್ನು ಹೊರತಂದಿತು. ಅಲ್ಲದೆ ಇದನ್ನು ಅನೇಕ ಭಾಷೆಗಳಿಗೆ ಭಾಷಾಂತರಿಸಿ ಪ್ರಕಟನೆಗೊಳಿಸಿದರು.

ಸ್ವೆಟಾಸ್ಲಾವ್ ಅವರ ಪ್ರತಿಭೆ ನಾನಾ ರೀತಿಯಲ್ಲಿದ್ದು ಅವರು ಆಗಾಗ್ಗೆ ಅದ್ವಿತೀಯವಾದ ತಾತ್ವಿಕ ಅಂಶಗಳನ್ನು ಕೃತಿಗಳಲ್ಲಿ ಅಳವಡಿಸಿದ್ದಾರೆ. ಅವರ ಕಥನ ಕತೆಗೆ ``Nearer to You" ಮತ್ತು ``Mother Earth" ಉತ್ತಮ ಚಿತ್ರಗಳಾಗಿವೆ ಹಾಗೂ ಅವರ ಕೆಲವು ಚಿತ್ರಗಳಲ್ಲಿ ನೈಜತೆ ಮತ್ತು ಶೃಂಗಾರಭರಿತವಾಗಿರುವುದನ್ನು ಕಾಣಬಹುದು. ಶಕ್ತಿಯುತ ಚಿಂತನ ಶೀಲತೆ ಸ್ಪಷ್ಟವಾಗಿದ್ದು, ನೈಜಸ್ವರೂಪವನ್ನು "Patter's House" "My Red Sari" ಮತ್ತು "Daughter of the Sea" ಚಿತ್ರಗಳಲ್ಲಿ ಕಾಣಬಹುದು. ಹಿಮಾಲಯದ ಪ್ರಕೃತಿ ಚಿತ್ರಗಳಲ್ಲಿ ಹೊಳಪು ಬಣ್ಣಗಳು ಪ್ರಮುಖವಾಗಿದ್ದು, ವೈವಿಧ್ಯಮಯವಾಗಿ ನಿಲ್ಲುತ್ತವೆ.

ಅವರು ಅನೇಕ ಭಾವಚಿತ್ರಗಳನ್ನು ರಚಿಸಿದ್ದು, ಅವುಗಳಲ್ಲಿ ಕುಳಿತಿರುವ ವ್ಯಕ್ತಿಯ ಭಂಗಿಗೆ ಹೆಚ್ಚು ಪ್ರಾಧಾನ್ಯತೆ ಕಾಣಬಹುದು. ಅವರ ತಂದೆ - ತಾಯಿಯವರ ಭಾವಚಿತ್ರಗಳ ಶ್ರೇಣಿಯಲ್ಲಿ ತಂದೆಯ ಭಾವಚಿತ್ರ "Professor Nicholas Roerich" ಜವಾಹರ್‌ಲಾಲ್ ನೆಹರು, ಶ್ರೀಮತಿ ದೇವಿಕಾ ರಾಣಿ ಮುಂತಾದ ಚಿತ್ರಗಳಲ್ಲಿ ವ್ಯಕ್ತಿಯ ಸೌಂದರ್ಯ, ಜೀವಂತಿಕೆ, ಅಂತರಾತ್ಮದ ಗ್ರಹಿಕೆ ಹಾಗೂ ಪ್ರಖರವಾದ ಬಣ್ಣಗಳು ಪ್ರೇಕ್ಷಕರನ್ನು ಆಕರ್ಷಿಸುತ್ತದೆ.

1961ರಲ್ಲಿ ಇವರ ವಿಶಿಷ್ಟ ಕಲಾ ಸೇವೆಗಾಗಿ ಭಾರತ ಸರ್ಕಾರದವರು ಪದ್ಮಭೂಷಣ ಪ್ರಶಸ್ತಿಯನ್ನು ಕೊಟ್ಟು ಗೌರವಿಸಿದರು. ಈ ಸಂದರ್ಭದಲ್ಲಿ ರೋರಿಕ್‌ರವರ ಅಭಿಮಾನಿಗಳು ದೆಹಲಿಯಲ್ಲಿ ಮತ್ತೊಮ್ಮೆ ಅವರ ಕಲಾ ಕೃತಿಗಳ ಪ್ರದರ್ಶನವನ್ನು ಏರ್ಪಡಿಸಿದ್ದರು. ನಂತರ ಇವರ ಕಲಾ ಪ್ರದರ್ಶನವು ಕಲ್ಕತ್ತಾ ಅಕಾಡೆಮಿ ಅಫ್ ಫೈನ್ ಆರ್ಟ್ಸ್‌ನಲ್ಲಿ ಏರ್ಪಾಟಾಗಿ ಕಲಾ ಪ್ರಿಯರಿಗೆ ಹೆಚ್ಚಿನ ಅವಕಾಶ ಕಲ್ಪಿಸಿತು.

1960 ರಿಂದ 71 ರವರೆಗೆ ರೋರಿಕ್ ದಂಪತಿಗಳು ಅನೇಕ ಬಾರಿ ರಷ್ಯಾ ಹಾಗೂ ಯೂರೋಪ್ ರಾಷ್ಟ್ರಗಳಲ್ಲಿ ಸಂಚರಿಸಿ ಅನೇಕ ಕಲಾ ಸಂಸ್ಥೆಗಳಲ್ಲಿ ತಮ್ಮ ಕಲಾ ಅಧ್ಯಯನದ ಬಗ್ಗೆ ಉಪನ್ಯಾಸಗಳನ್ನು ನೀಡಿ ಜನಪ್ರಿಯತೆಯನ್ನು ಗಳಿಸಿಕೊಂಡರು.

1961ರ ಸಮಯದಲ್ಲಿ ಬೆಂಗಳೂರಿನಲ್ಲಿ ಒಂದು ವರ್ಷದ ಹಿಂದೆಯಷ್ಟೇ ಸ್ಥಾಪಿತವಾಗಿದ್ದ ಮೈಸೂರು ಪ್ರದೇಶ ಚಿತ್ರಕಲಾ ಪರಿಷತ್ತು ಆಗತಾನೆ ತನ್ನ ರಚನಾತ್ಮಕ ಕಲಾ ಚಟುವಟಿಕೆಗಳ ಮೂಲಕ ಕಲಾ ರಸಿಕರ

ಗಮನಕ್ಕೆ ಬಂದಿತ್ತು. ಡಾ. ಸ್ವೆಟಾಸ್ಲಾವ್‌ರವರನ್ನು ಭೇಟಿ ಮಾಡುವ ಸಲುವಾಗಿ ಕೆಲವು ಕಲಾವಿದರು ಪ್ರಯತ್ನಪಟ್ಟು ಯಶಸ್ವಿಯಾದರು. ಪರಿಷತ್ತಿನ ಕಾರ್ಯದರ್ಶಿಗಳಾಗಿದ್ದ ಎಂ.ಎಸ್. ನಂಜುಂಡರಾವ್‌ರವರು ಲಿಖಿತ ಮುಖೇನ ರೋರಿಕ್‌ರವರ ಅಪ್ಪಣೆಯನ್ನು ಪಡೆದು ಇನ್‌ಫೆಂಟ್ರಿ ರಸ್ತೆಯ ನಿವಾಸದಲ್ಲಿ ಒಂದು ದಿನ ಅವರನ್ನು ಭೇಟಿ ಮಾಡುವ ಅವಕಾಶ ಕಲ್ಪಿಸಿಕೊಂಡರು. ಈ ಸಂದರ್ಶನದಲ್ಲಿ ಆಗಿನ ಅಧ್ಯಕ್ಷರಾದ ಎಂ. ಆರ್ಯಮೂರ್ತಿ, ಎಚ್.ಎಸ್. ಇನಾಮತಿ, ಎಸ್.ಎಸ್. ಕುಕ್ಕೆ, ಎಸ್.ಆರ್. ಅಯ್ಯಂಗಾರ್ ಮತ್ತು ಎಂ.ಬಿ. ಬಸವರಾಜು ಅವರೊಡನೆ, ಈ ಲೇಖಕರು ಭಾಗವಹಿಸಿದ್ದರು. ಅಂದಿನ ಭೇಟಿ ಅತ್ಯಂತ ಸೌಹಾರ್ದಯುತವಾಗಿ ನಡೆದು ಭವಿಷ್ಯದ ಭಾಂದವ್ಯಕ್ಕೆ ಒಳ್ಳೆಯ ನಾಂದಿಯಾಯಿತು. ಪರಿಣಾಮವಾಗಿ ರೋರಿಕ್‌ರವರು ಚಿತ್ರಕಲಾ ಪರಿಷತ್ತಿನ ಬಹುಮುಖ ಬೆಳವಣಿಗೆಗೆ ಕಾರಣರಾದರು. ತನ್ನ ನಿರಂತರ ಕಾರ್ಯಕ್ರಮಗಳಿಂದ ಪರಿಷತ್ತು ನಾಡಿನ, ಹಾಗೂ ರಾಷ್ಟ್ರದ ಪ್ರಮುಖ ಕಲಾ ಕೇಂದ್ರವಾಗಿ ಬೆಳವಣಿಗೆ ಹೊಂದಿತು. ರೋರಿಕ್‌ರವರ ಅನುಭವ ಮತ್ತು ಮಾರ್ಗದರ್ಶನ ಈ ಸಂದರ್ಭದಲ್ಲಿ ಸ್ಮರಣೀಯವಾದುದು.

1947ರಲ್ಲಿ ಚಿತ್ರಕಲಾ ಪರಿಷತ್ತು ರೋರಿಕ್‌ರವರ ತಂದೆ ನಿಕೋಲಾಸ್ ರೋರಿಕ್‌ರವರ ಜನ್ಮ ಶತಾಬ್ದಿಯ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಅತ್ಯಂತ ವಿಜೃಂಭಣೆಯಿಂದ ಆಚರಿಸಿತು. ಇದರ ಅಂಗವಾಗಿ ಏರ್ಪಾಟಾಗಿದ್ದ ಮಕ್ಕಳು ಸ್ಥಳದಲ್ಲಿಯೇ ಚಿತ್ರ ಬರೆಯುವ ಸ್ಪರ್ಧೆ ಯಶಸ್ವಿಯಾಗಿ ನಡೆಯಿತು. ಇಂದಿಗೂ ಈ ಕಾರ್ಯಕ್ರಮ ಪ್ರತಿವರ್ಷವೂ ನಡೆದು ಬರುತ್ತಿದೆ. ಈ

ಒಂದು ಕಾರ್ಯಕ್ರಮವು ಬೆಂಗಳೂರು ನಾಗರೀಕರ ಹಾಗೂ ಮಕ್ಕಳ ಜನಪ್ರಿಯ ಕಲಾ ಚಟುವಟಿಕೆಯಾಗಿದೆ.

1974ರಿಂದ 75ರವರೆಗೆ ರೋರಿಕ್‌ರವರ ಹಾಗೂ ಅವರ ತಂದೆಯವರ ಕಲಾಕೃತಿಗಳನ್ನು ಸೋವಿಯತ್ ದೇಶದ ಪ್ರಮುಖ ನಗರಗಳ ಕಲಾ ಭವನಗಳಲ್ಲಿ ಪ್ರದರ್ಶನಕ್ಕೆ ಏರ್ಪಾಟು ಮಾಡಿದ್ದರು. ಪ್ರದರ್ಶನಗಳನ್ನು ಸೋವಿಯತ್ ಜನತೆಯು ಸಾಲು ಸಾಲಾಗಿ ನಿಂತು ವೀಕ್ಷಿಸಿ ರೋರಿಕ್‌ರವರಿಗೆ ತಮ್ಮ ಗೌರವವನ್ನು ಅರ್ಪಿಸಿದರು. ಸ್ವೆಟಾಸ್ಲಾವ್‌ರವರಿಗೆ ರಾಷ್ಟ್ರದ ಪ್ರಮುಖ ಪ್ರಶಸ್ತಿಗಳನ್ನು ಕೊಟ್ಟು ಗೌರವಿಸಿ ವಿಜೃಂಭಣೆಯಿಂದ ದಂಪತಿಗಳನ್ನು ಸನ್ಮಾನಿಸಿದರು.

ಸೋವಿಯತ್ ದೇಶವು ಇವರಿಗೆ ನೀಡಿದ ಗೌರವಯುತ ಸನ್ಮಾನ ಹಾಗೂ ಅತ್ಯುತ್ತಮ ಏರ್ಪಾಟುಗಳಿಂದ ರೋರಿಕ್‌ರವರ ಕಲಾಕೃತಿಗಳಿಗೆ ಹೆಚ್ಚಿನ ಪ್ರಚಾರ ದೊರಕಿತು. ಈ ಪ್ರದರ್ಶನಗಳ ಪರಿಣಾಮವಾಗಿ ಯೂರೋಪಿನ ಅನೇಕ ರಾಷ್ಟ್ರಗಳು ಇವರ ಕಲಾಕೃತಿಗಳನ್ನು ತಮ್ಮ ದೇಶಗಳಲ್ಲಿ ಪ್ರದರ್ಶಿಸುವಂತೆ ಆಹ್ವಾನವನ್ನಿತ್ತರು. ಬಲ್ಗೇರಿಯ ರಾಷ್ಟ್ರಪತಿಗಳ ಆಹ್ವಾನದ ಮೇಲೆ ರೋರಿಕ್‌ರವರು ತಮ್ಮ ಪತ್ನಿಯವರೊಡನೆ ಸೋಫಿಯಾ ನಗರಕ್ಕೆ ಭೇಟಿ ಇತ್ತರು. ಅಲ್ಲಿನ ಪ್ರಮುಖ ಕಲಾ ಸಂಸ್ಥೆಗಳು ಮತ್ತು ಬಲ್ಗೇರಿಯಾ ವಿಶ್ವವಿದ್ಯಾಲಯಗಳಲ್ಲಿ ಇವರಿಗೆ ರಾಷ್ಟ್ರದ ಪ್ರಮುಖ ಪ್ರಶಸ್ತಿಗಳನ್ನಿತ್ತು ಗೌರವಿಸಿದರು. ಆಗಿನ ಬಲ್ಗೇರಿಯಾದ ರಾಷ್ಟ್ರಪತಿಗಳಾಗಿದ್ದ ಮಿ. ಜೀವ್‌ಕೋವ್‌ರವರು ರೋರಿಕ್ ದಂಪತಿಗಳನ್ನು ಅತ್ಯಂತ ಆದರದಿಂದ ಬಲ್ಗೇರಿಯಾ ರಾಷ್ಟ್ರದ ಅಧಿಕೃತ ಗೌರವ ಅತಿಥಿಗಳಾಗಿ ಸ್ವಾಗತಿಸಿದರು.

ಬಲ್ಗೇರಿಯಾದ ಕಲಾ ಅಕಾಡೆಮಿಯ ಪರವಾಗಿ ಹೊರದೇಶದ ಪ್ರತಿಷ್ಠಿತ ಕಲಾ ವ್ಯಕ್ತಿಗೆ ಅತ್ಯುನ್ನತ ಪ್ರಶಸ್ತಿಯನ್ನಿತ್ತು ಗೌರವಿಸಿದರು.

1978ರ ಮೇ 8ರಂದು ಬಲ್ಗೇರಿಯಾದ ಸಿರಿಲ್ ಮತ್ತು ಮೆಥೊಡಿಯನ್ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟನ್ನು ಇತ್ತು ಗೌರವಿಸಿದರು. ಆ ಸಮಯದಲ್ಲಿ ರಾಷ್ಟ್ರದ ಗೌರವಾನ್ವಿತ ವ್ಯಕ್ತಿಗಳ ಜೊತೆ ಅಧ್ಯಕ್ಷರಾದ ಮಿ. ಜೀವಕೋವ್‌ರವರು ಹಾಜರಿದ್ದುದು ಒಂದು ವಿಶೇಷ. ಜೊತೆಗೆ ಬಲ್ಗೇರಿಯಾದ ಸ್ವಾತಂತ್ರ್ಯದ ಶತಮಾನೋತ್ಸವ ಪ್ರಶಸ್ತಿಯನ್ನಿತ್ತು ಗೌರವಿಸಿದರು. ಟರ್‌ನೋವ್ ವಿಶ್ವವಿದ್ಯಾಲಯವು ಬಂಗಾರದ ಪದಕವನ್ನಿತ್ತು ಗೌರವಿಸಿತು. ಈ ಅಭೂತಪೂರ್ವ ಸನ್ಮಾನಗಳ ನಂತರ ರೋರಿಕ್ ದಂಪತಿಗಳು ಸೋವಿಯತ್ ರಷ್ಯಾಕ್ಕೆ ಮರಳಿದರು. ಸ್ವೆಟಾಸ್ಲಾವ್‌ರವರನ್ನು ಸೋವಿಯತ್ ಕಲಾ ಅಕಾಡೆಮಿಗೆ ಗೌರವ ಸದಸ್ಯರನ್ನಾಗಿ ಆಯ್ಕೆ ಮಾಡಿ ತನ್ನ ಅಪಾರ ಗೌರವವನ್ನು ಕೊಟ್ಟಿತು.

ಈ ಪ್ರಶಸ್ತಿಗಳ ಹಾಗೂ ಗೌರವಾದರಗಳ ಸುರಿಮಳೆಯಿಂದ ಪ್ರಭಾವಿತರಾಗಿ ಇಡೀ ಪೂರ್ವ ಯೂರೋಪ್ ರಾಷ್ಟ್ರಗಳು ದೈನಂದಿನ, ವಾರ, ಪಾಕ್ಷಿಕ, ಮತ್ತು ಮಾಸ ಪತ್ರಿಕೆಗಳಲ್ಲಿ ಸ್ವೆಟಾಸ್ಲಾವ್‌ರವರನ್ನು ಕುರಿತು ಅಪಾರ ಪ್ರಶಂಸೆಯುತವಾದ ಲೇಖನಗಳನ್ನು ಪ್ರಕಟಿಸಿದವು. ಇದರಿಂದ ಯೂರೋಪ್ ರಾಷ್ಟ್ರಗಳಲ್ಲಿ ಇವರ ಬಗ್ಗೆ ಉತ್ತಮ ಪ್ರಚಾರವಾಗಿ ಮನೆ ಮಾತಾಗಿ ಪರಿವರ್ತನೆಯಾಯಿತು.

ಭಾರತಕ್ಕೆ ಹಿಂದಿರುಗಿದ ಅಲ್ಪಕಾಲದಲ್ಲಿಯೇ ರೋರಿಕ್‌ರವರಿಗೆ ಕೇಂದ್ರ ಲಲಿತ ಕಲಾ ಅಕಾಡೆಮಿ ಅತ್ಯುನ್ನತ್ತ ಪ್ರಶಸ್ತಿ ``ಫೆಲೋಷಿಪ್‌ನ್ನು"

ಕೊಟ್ಟು ಗೌರವವನ್ನು ವ್ಯಕ್ತಪಡಿಸಿತು. 1987ನೇ ಅಕ್ಟೋಬರ್ 16ರಂದು ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಕಲಾಭವನದಲ್ಲಿ ಜರುಗಿದ ಅಪೂರ್ವ ಸಮಾರಂಭದಲ್ಲಿ ಅಕಾಡೆಮಿಯ ಫೆಲೋಷಿಪ್‌ನ್ನು ಸ್ವೆಟಾಸ್ಲಾವ್ ರೋರಿಕ್‌ರವರಿಗೆ ಕೊಡಲಾಯಿತು. ಕರ್ನಾಟಕದ ರಾಜ್ಯಪಾಲರಾದ ಅಶೋಕನಾಥ ಬ್ಯಾನರ್ಜಿಯವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಕೇಂದ್ರ ಲಲಿತ ಕಲಾ ಅಕಾಡೆಮಿ ಅಧ್ಯಕ್ಷರಾದ ಪ್ರೊ. ಶಂಖೋ ಚೌದರಿಯವರು ಫೆಲೋಷಿಪ್‌ನ್ನು ಪ್ರಧಾನ ಮಾಡಿದರು. ಪರಿಷತ್ತಿನ ಅಧ್ಯಕ್ಷರಾದ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ಹಾಜರಿದ್ದರು. ನಗರದ ಪ್ರತಿಷ್ಠಿತ ನಾಗರೀಕರು ಈ ಸಮಾರಂಭದಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಮಾರಂಭಕ್ಕೆ ಶೋಭೆ ತಂದು ಕೊಟ್ಟರು. ಇದರ ಅಂಗವಾಗಿ ಚಿತ್ರಕಲಾ ಪರಿಷತ್ತಿನ ಭವ್ಯ ಕಲಾ ಗ್ಯಾಲರಿಗಳಲ್ಲಿ ಡಾ. ರೋರಿಕ್‌ರವರ ಕಲಾಕೃತಿಗಳನ್ನು ಪ್ರದರ್ಶನಕ್ಕೆ ಇಟ್ಟಿದ್ದುದು ಬಂಗಾರಕ್ಕೆ ಮೆರುಗು ಕೊಟ್ಟಂತಿತ್ತು. ಅನೇಕ ಕಲಾ ರಸಿಕರು ರೋರಿಕ್‌ರವರ ಕಲಾ ಕೃತಿಗಳನ್ನು ನೋಡಿ ಸಂತೋಷಿಸಿದರು. ದಕ್ಷಿಣ ಭಾರತ ಅನೇಕ ಪತ್ರಿಕೆಗಳು ರೋರಿಕ್ ಕಲಾ ಪ್ರದರ್ಶನದ ಬಗೆಗೆ ವಿಶೇಷ ಲೇಖನಗಳನ್ನು ಪ್ರಕಟಿಸಿದವು.

1990 ಆಗಸ್ಟ್ 23ರಂದು ಕರ್ನಾಟಕ ಚಿತ್ರಕಲಾ ಪರಿಷತ್ತು ಡಾ. ಸ್ವೆಟಾಸ್ಲಾವ್ ರೋರಿಕ್‌ರವರನ್ನು 87ನೇ ಜನ್ಮ ದಿನೋತ್ಸವದಂದು ಸನ್ಮಾನಿಸಿ ತನ್ನ ಅಭಿಮಾನ ಪೂರ್ವಕ ಗೌರವವನ್ನು ತೋರಿಸಿತು. ಈ ಮಧ್ಯೆ ಸ್ವೆಟಾಸ್ಲಾವ್ ರೋರಿಕ್‌ರವರು ಚಿತ್ರಕಲಾ ಪರಿಷತ್ತಿನೊಡನೆ ತಾವು ಕಲ್ಪಿಸಿಕೊಂಡಿದ್ದ ಮೂವತ್ತು ವರ್ಷಗಳ ಸ್ನೇಹ ಸಂಬಂಧದ ಕುರುಹಾಗಿ

ತಮ್ಮ ಹಾಗೂ ತಮ್ಮ ಪೂಜ್ಯ ತಂದೆ ನಿಕೋಲಾಸ್ ರೋರಿಕ್‌ರವರ 117 ಕಲಾ ಕೃತಿಗಳನ್ನು ಚಿತ್ರಕಲಾ ಪರಿಷತ್ತಿಗೆ ಕೊಡುಗೆಯಾಗಿ ನೀಡಿದರು. 1990ನೇ ಆಗಸ್ಟ್ 23ರಂದು ಚಿತ್ರಕಲಾ ಪರಿಷತ್ತಿನ ಕಲಾ ಭವನದಲ್ಲಿ "ರೋರಿಕ್ ಕಲಾ ಕೇಂದ್ರ"ದ ಶಿಲಾನ್ಯಾಸವನ್ನು ನೆರವೇರಿಸಲಾಯಿತು. ಅಂದು ಆಗಿನ ಮುಖ್ಯಮಂತ್ರಿಯಾಗಿದ್ದ ಶ್ರೀ ವಿರೇಂದ್ರ ಪಾಟೀಲರು ಶಿಲಾನ್ಯಾಸವನ್ನು ನೆರವೇರಿಸಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ರೋರಿಕ್‌ರವರು ಮತ್ತು ಶ್ರೀಮತಿ ದೇವಿಕಾ ರಾಣಿಯವರು ಹಾಜರಿದ್ದು ಕಲಾಕೃತಿಗಳನ್ನು ವಿದ್ಯುಕ್ತವಾಗಿ ಚಿತ್ರಕಲಾ ಪರಿಷತ್ತಿಗೆ ಅರ್ಪಿಸಿದರು. ಚಿತ್ರಕಲಾ ಪರಿಷತ್ತಿನ ಅಧ್ಯಕ್ಷರಾದ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ಕೃತಿಗಳನ್ನು ಪರಿಷತ್ತಿನ ಪರವಾಗಿ ಸ್ವೀಕರಿಸಿದರು.

ರೋರಿಕ್ ದಂಪತಿಗಳು ಬೆಂಗಳೂರು ನಗರದ ಸಾಂಸ್ಕೃತಿಕ ಕ್ಷೇತ್ರದೊಡನೆ ಬೆಳೆಸಿಕೊಂಡಿದ್ದ ನಿಕಟ ಬಾಂಧವ್ಯದ ಕುರುಹಾಗಿ ಬೆಂಗಳೂರಿನ ನಾಗರೀಕರು 1991ನೇ ಅಕ್ಟೋಬರ್ 23ರಂದು ಅತ್ಯಂತ ವಿಜೃಂಭಣೆಯಿಂದ ಸನ್ಮಾನ ಮಾಡಿ ಗೌರವಿಸಿದರು. ಆಗಿನ ವಿಧಾನಸಭೆಯ ಅಧ್ಯಕ್ಷರೂ ಚಿತ್ರಕಲಾ ಪರಿಷತ್ತಿನ ಟ್ರಸ್ಟಿಗಳೂ ಆದ ಶ್ರೀ ಎಸ್.ಎಂ. ಕೃಷ್ಣರವರ ಅಧ್ಯಕ್ಷತೆಯಲ್ಲಿ ಸಮಾರಂಭ ಜರುಗಿತು. ಸಹಕಾರ ಸಚಿವರಾಗಿದ್ದ ಶ್ರೀ ಕೆ.ಎಚ್. ಪಾಟೀಲರು ರೋರಿಕ್‌ರವರಿಗೆ ಅಭಿನಂದನೆಗಳನ್ನು ಅರ್ಪಿಸಿದರು. ಡಾ. ಜೀವರಾಜ ಆಳ್ವ ಮತ್ತು ಡಾ. ಹೇಮಚಂದ್ರ ಸಾಗರ್‌ರವರು ನಾಗರೀಕರ ಪರವಾಗಿ ಗೌರವಯುತ ಪ್ರಶಂಸೆಗಳನ್ನು ಅರ್ಪಿಸಿದರು. ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ಮತ್ತು ಶ್ರೀಮತಿ

ಚಂದ್ರಪ್ರಭ ಅರಸ್‌ರವರು ಪರಿಷತ್ತಿನ ಪರವಾಗಿ ಅಭಿನಂದನೆಗಳನ್ನು ಸಲ್ಲಿಸಿದರು. ಸಮಾರಂಭವು ಚಿರಸ್ಮರಣೀಯವಾಗಿ ಜರುಗಿ ರೋರಿಕ್ ದಂಪತಿಗಳಿಗೆ ಅತ್ಯಂತ ಸಂತೋಷವನ್ನುಂಟು ಮಾಡಿತು.

1989ರಲ್ಲಿ ಸ್ವಲ್ಪ ಅಸ್ವಸ್ಥತೆಯಿಂದ ಚೇತರಿಸಿಕೊಳ್ಳುವ ಸಲುವಾಗಿ ರೋರಿಕ್‌ರವರು ನಗರದ ಖಾಸಗಿ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ನಂತರ ಇವರಿಗೆ ವೈದ್ಯಕೀಯ ನೆರವು ಸುಲಭವಾಗಿ ಸಿಗುವಂತಾಗಬೇಕೆಂದು ನಗರದ ಅಶೋಕ ಹೋಟೆಲ್‌ನಲ್ಲಿ ತಂಗಲು ಏರ್ಪಾಟಾಯಿತು. ಕಾಲಕಾಲಕ್ಕೆ ಸೋವಿಯತ್ ರಷ್ಯಾದ ಪ್ರತಿಷ್ಠಿತ ವ್ಯಕ್ತಿಗಳು ರೋರಿಕ್ ಸಂದರ್ಶನಕ್ಕಾಗಿ ಬರುತ್ತಿದ್ದರು. ಈ ಮಧ್ಯೆ ಕಲ್ಕತ್ತದ ರವೀಂದ್ರ ಭಾರತಿ ಸೊಸೈಟಿ ಪರವಾಗಿ ರೋರಿಕ್‌ರವರನ್ನು 1991ನೇ ಆಗಸ್ಟ್ 8ರಂದು ಬೆಂಗಳೂರಿನ ಅಶೋಕ ಹೋಟೆಲ್‌ನಲ್ಲಿ ಸನ್ಮಾನಿಸಿದರು. ಕೇಂದ್ರದ ಮಾಜಿ ವಿದ್ಯಾ ಸಚಿವರಾದ ಡಾ. ಪ್ರತಾಪಚಂದ್ರ ಚುಂದರ್‌ರವರು ತಮ್ಮ ಬಂಗಾಳಿ ಮಿತ್ರರೊಡನೆ ಬಂದು ಸನ್ಮಾನ ಸಂದರ್ಭದಲ್ಲಿ ಹಾಜರಿದ್ದು ಗೌರವವನ್ನು ಅರ್ಪಿಸಿದರು. ಈ ಪ್ರಶಸ್ತಿಯು ಕಲೆಯ ರಕ್ಷಣೆ ಮತ್ತು ಅಂತರರಾಷ್ಟ್ರೀಯ ಸದ್ಭಾವನೆಗಾಗಿ ಕೊಡಲಾಯಿತು.

1992ನೇ ಜೂನ್ 16ರಂದು ರೋರಿಕ್‌ರವರ ಗೌರವಾರ್ಥ ಒಂದು ಸಂಕಿರಣ ಏರ್ಪಡಿಸಲಾಗಿದ್ದಿತು. ಈ ಕಾರ್ಯಕ್ರಮದಲ್ಲಿ ರೋರಿಕ್‌ರವರ ಪರಮ ಮಿತ್ರರಾದ ಆಸ್ಟ್ರೇಲಿಯನ್ ಮಿ. ಮೈಕೇಲ್ ಬ್ರೀನ್, ರಷ್ಯಾದ ಶ್ರೀಮತಿ ಷಪಸ್ನಿಕೋವಾ, ಮಿ. ಬಿ. ರೆಬೊಕೊವ್, ಶ್ರೀಮತಿ ಮಾರ್ಗನ್ ಹಾಗೂ ರಷ್ಯಾ ದೂತವಾಸದ ಅನೇಕ ಪ್ರತಿಷ್ಠಿತರು ಭಾಗವಹಿಸಿದ್ದರು.

ಅನಾರೋಗ್ಯದಿಂದ ನರಳುತ್ತಿದ್ದ ರೋರಿಕ್‌ರವರ ಆರೋಗ್ಯ ಪದೇ ಪದೇ ಕ್ಷೀಣಿಸುತ್ತಾ ಬರುತ್ತಿತ್ತು. ಅವರ ದೇಹ ಚಿಕಿತ್ಸೆಗಳಿಗೆ ಅಷ್ಟಾಗಿ ಪ್ರತಿಕ್ರಿಯಿಸುತ್ತಿರಲಿಲ್ಲ. ಈ ಕಾರಣದಿಂದಾಗಿ ಡಾ. ಸ್ವೆಟಾಸ್ಲಾವ್ ರೋರಿಕ್ 1993ನೇ ಜನವರಿ 30ರಂದು ಶನಿವಾರ ಮಧ್ಯಾಹ್ನ 4.00 ಗಂಟೆಗೆ ನಿಧನರಾದರು. ವಿಶ್ವ ಕಲಾ ರಂಗದ ಮಹಾ ಶಕ್ತಿ ಅಸ್ತಂಗತವಾಯಿತು. ಫೆಬ್ರವರಿ ಎರಡರಂದು ಚಿತ್ರಕಲಾ ಪರಿಷತ್ತಿನ ಪ್ರಾಂಗಣದಲ್ಲಿ ಅವರ ಪಾರ್ಥಿವ ಶರೀರವನ್ನು ಅಭಿಮಾನಿಗಳ ದರ್ಶನಕ್ಕಾಗಿ ಇಡಲಾಗಿತ್ತು. ರಷ್ಯಾ ಹಾಗೂ ಭಾರತದ ಪ್ರತಿಷ್ಠಿತ ವ್ಯಕ್ತಿಗಳು ಅಪಾರ ನಾಗರೀಕರು ಅಭಿಮಾನಿಗಳು ರೋರಿಕ್‌ರವರಿಗೆ ತಮ್ಮ ಅಂತಿಮ ಗೌರವವನ್ನು ಅರ್ಪಿಸಿದರು. ತಾಟಗುಣಿ ಎಸ್ಟೇಟಿನಲ್ಲಿ ಅಂದು ಸಂಜೆ ಸಕಲ ಸರ್ಕಾರಿ ಮರ್ಯಾದೆಯೊಡನೆ ಅವರ ಭೌತಿಕ ಶರೀರವನ್ನು ಸಮಾಧಿ ಮಾಡಲಾಯಿತು. ನಾಡಿನ ಬಹುತೇಕ ಪತ್ರಿಕೆಗಳು ಎಲ್ಲಾ ಪ್ರಚಾರ ಮಾಧ್ಯಮಗಳು ರೋರಿಕ್‌ರವರ ನಿಧನದ ವಾರ್ತೆಯನ್ನು ಸೂಕ್ತರೀತಿಯಲ್ಲಿ ಬಿತ್ತರಿಸಿದವು.

ಇತಿಹಾಸ ಪ್ರಸಿದ್ಧವಾದ ರಷ್ಯನ್ ಕುಟುಂಬದಲ್ಲಿ ಜನಿಸಿದ ಕಲಾಕಾರ, ಸಂಶೋಧಕ, ವಿಜ್ಞಾನಿ(ಆಧ್ಯಾತ್ಮಿಕವಾದಿ) ಹಾಗೂ ಮಾನವತಾವಾದಿ ನಿಕೋಲಾಸ್ ರೋರಿಕ್‌ರವರ ಪುತ್ರರಾಗಿ ಸ್ವೆಟಾಸ್ಲಾವ್‌ರವರು ತಂದೆಯ ಅನೇಕ ಗುಣಗಳನ್ನು ಅವಿರ್ಭವಿಸಿಕೊಂಡದ್ದು ಒಂದು ವಿಶೇಷ. ಕರ್ನಾಟಕದ ಸಂಸ್ಕೃತಿ ಕ್ಷೇತ್ರದೊಡನೆ ನಿಕಟ ಸಂಪರ್ಕವನ್ನು ಇರಿಸಿಕೊಂಡು ಚಿತ್ರಕಲಾ ಕ್ಷೇತ್ರದ ಅದ್ವಿತೀಯ ವ್ಯಕ್ತಿಯಾಗಿ ಮೆರೆದ ರೋರಿಕ್‌ರವರು ನಮ್ಮಿಂದ ಅಗಲಿದ್ದಾರೆ. ಅವರ ಮಾರ್ಗ ದರ್ಶನದಿಂದ ಚಿತ್ರಕಲಾ ಪರಿಷತ್ತು ಬೃಹತ್

ಆಗಿ ಬೆಳೆದಿದೆ. ನಗರದ ಪ್ರತಿಷ್ಠಿತ ಭಾಗದಲ್ಲಿ ಚಿತ್ರಕಲಾ ಪರಿಷತ್ತು ನಿರ್ಮಿಸಿರುವ ಅತ್ಯಂತ ಸುಸಜ್ಜಿತವಾದ ಕಲಾ ಭವನ ಕಟ್ಟಿದ ಸಮಯದಲ್ಲಿ ಪ್ರತಿ ಹಂತದಲ್ಲಿ ಮಾರ್ಗದರ್ಶನ ಮಾಡಿ ಕಟ್ಟಡವು ಅಂತರಾಷ್ಟ್ರೀಯ ಮಟ್ಟವನ್ನು ಮುಟ್ಟುವಂತೆ ಸಲಹೆಗಳನ್ನು ನೀಡುತ್ತಿದ್ದರು. 1983 ರಿಂದ 1990ರ ವರೆಗೆ ಬಂದ ಅನೇಕ ಅಂತರಾಷ್ಟ್ರೀಯ ಕಲಾ ಹಾಗೂ ವಾಸ್ತುಶಿಲ್ಪ ವಿನ್ಯಾಸಗಳ ಪ್ರದರ್ಶನಗಳು ಚಿತ್ರಕಲಾ ಪರಿಷತ್ತಿನಲ್ಲಿ ನಡೆದಿವೆ. ಇದರಲ್ಲಿ ಬಲ್ಗೇರಿಯಾ ಹಾಗೂ ಸೋವಿಯತ್ ರಷ್ಯಾದ ಪ್ರದರ್ಶನಗಳು ಹೆಚ್ಚಿನ ಸಂಖ್ಯೆಯಲ್ಲಿ ಇದ್ದುದು ರೋರಿಕ್‌ರವರ ಪ್ರಭಾವದಿಂದ.

ಚಿತ್ರಕಲಾ ಪರಿಷತ್ತು ಸ್ಥಾಪಿಸಿದ ಕಲಾ ಶಾಲೆ ಕ್ರಮೇಣ ಕಲಾ ಕಾಲೇಜಾಗಿ ಬೆಂಗಳೂರು ವಿಶ್ವವಿದ್ಯಾಲಯದ ಅಂಗೀಕಾರದೊಂದಿಗೆ ಬೆಳವಣಿಗೆ ಹೊಂದಿದೆ. ಈ ಕಾಲೇಜಿನ ಕಲಾ ಪಠ್ಯ ಕ್ರಮವನ್ನು ತಯಾರಿಸಲು ಪ್ರಥಮವಾಗಿ ಅಧ್ಯಯನ ಮುಂಡಲಿಯ ಅಧ್ಯಕ್ಷರಾಗಿ ರೋರಿಕ್‌ರವರನ್ನು ವಿಶ್ವವಿದ್ಯಾಲಯ ನೇಮಿಸಿತ್ತು. ಇದರ ಪರಿಣಾಮವಾಗಿ ಅವರ ಅಪಾರ ಅನುಭವದಿಂದ ಭಾರತದ ಪ್ರತಿಷ್ಠಿತ ಕಲಾ ಶಿಕ್ಷಣ ಕೇಂದ್ರವಾಗಿ ಚಿತ್ರಕಲಾ ಪರಿಷತ್ತಿನ ಕಾಲೇಜು ಮಾರ್ಪಟ್ಟಿತು.

ಹಿಂದೆ ಮೈಸೂರು ಶ್ರೀ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್‌ನ ಕಲಾ ಶಿಕ್ಷಣ ಕ್ರಮವನ್ನು ಕಾಲೇಜಿನ ಮಟ್ಟಕ್ಕೇರಿಸಲು ಕರ್ನಾಟಕ ಸರ್ಕಾರ ನೇಮಿಸಿದ್ದ ಸಮಿತಿಯ ಅಧ್ಯಕ್ಷರಾದ ಡಾ. ರೋರಿಕ್‌ರವರು ಉತ್ತಮ ವರದಿಯನ್ನು ಸಲ್ಲಿಸಿ ಅದನ್ನು ಇಂದಿನ `ಕಾವಾ" ಸಂಸ್ಥೆಯಾಗಿ ಮಾರ್ಪಾಟು ಆಗಲು ಕಾರಣರಾದರು.

ಡಾ. ರೋರಿಕ್‌ರವರ ಹಾಗೂ ಅವರ ತಂದೆಯವರ ಕಲಾಕೃತಿಗಳು ವಿಶ್ವದ ಅನೇಕ ಕಲಾ ಸಂಗ್ರಹಾಲಯಗಳಲ್ಲಿ ರಾರಾಜಿಸುತ್ತಿವೆ. ಇವರ ತಂದೆ ಪ್ರೊ. ನಿಕೋಲಾಸ್ ರೋರಿಕ್‌ರವರು ತಮ್ಮ ಜೀವಿತ ಕಾಲದಲ್ಲಿ ರಷ್ಯಾ ಭೂವಲಯದಿಂದ ಮಂಗೋಲಿಯಾ, ಟಿಬೆಟ್, ಚೀನಾ, ನೇಪಾಳ ಆಲ್ಟಾಯ್ ಹಿಮಾಲಯ ಪ್ರಾಂತ್ಯ, ಇರಾನ್, ಅಫ್‌ಘನಿಸ್ಥಾನ ಮತ್ತಿತರ ಏಷಿಯಾದ ರಾಷ್ಟ್ರಗಳಲ್ಲಿ ದೀರ್ಘ ಸಂಚಾರ ಮಾಡಿ ಅಲ್ಲಿನ ಕಲೆ, ಸಂಸ್ಕೃತಿ ಇತಿಹಾಸ ಹಾಗೂ ನಿಸರ್ಗ ಸಂಪತ್ತಿನ ಬಗ್ಗೆ ಅಧ್ಯಯನ ಮಾಡಿದ್ದರು. ಮಂಗೋಲಿಯದ ನಿಗೂಢ ಶಂಬಾಲ ಕಣಿವೆಯನ್ನು ಹೊಕ್ಕು ಅಲ್ಲಿನ ಆಧ್ಯಾತ್ಮಿಕ ಮತ್ತು ಅತಿಮಾನವ ಸ್ಥಿತಿಯನ್ನು ಅಧ್ಯಯನ ಮಾಡಿ ವಾಪಸ್ಸು ಬಂದು ವಿಶ್ವಕ್ಕೆ ಶಂಬಾಲದ ಕಣಿವೆಯ ಬಗ್ಗೆ ಪ್ರಥಮವಾಗಿ ಸಂದೇಶವನ್ನು ಕೊಟ್ಟರು. ಭಾರತಕ್ಕೆ ಬಂದ ನಂತರ 1930-35ರ ಅವಧಿಯಲ್ಲಿ "ಅಗ್ನಿಯೋಗದ" ಬಗ್ಗೆ ಗ್ರಂಥವನ್ನು ರಚಿಸಿ ವಿಶ್ವದ ಆಧ್ಯಾತ್ಮಿಕ ಕ್ಷೇತ್ರಕ್ಕೆ ಅದ್ವಿತೀಯ ಕೊಡುಗೆ ನೀಡಿದ ಮಹನೀಯರು. ಭಾರತದ ಹಿಮಾಲಯ ಪರ್ವತಗಳ ಶ್ರೀಮಂತಿಕೆಯನ್ನು ಮನನ ಮಾಡಿಕೊಂಡು ಪೂರ್ವ ಹಿಮಾಲಯದಿಂದ ಪಶ್ಚಿಮದ ಕಾಶ್ಮೀರಿ ಕಣಿವೆಯವರೆಗೆ ದೀರ್ಘ ಸಂಚಾರ ಮಾಡಿ ಸುಮಾರು ಎರಡು ಸಾವಿರ ಕಲಾಕೃತಿಗಳನ್ನು ರಚಿಸಿ ವಿಶ್ವದಾಖಲೆ ನಿರ್ಮಿಸಿದ ಮಹಾನ್ ಕಲಾವಿದರು. ನಿಕೋಲಾಸ್ ರೋರಿಕ್‌ರವರು ತಮ್ಮ ಜೀವಿತ ಕಾಲದಲ್ಲಿ ಸುಮಾರು 7500 ಕಲಾ ಕೃತಿಗಳನ್ನು ರಚಿಸಿ ವಿಶ್ವದ ಕಲಾ ಪ್ರಪಂಚಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಇಂತಹ ಮಹಾನ್ ವ್ಯಕ್ತಿಯ ಸುಪುತ್ರರಾಗಿ ಜನಿಸಿ ಡಾ. ಸ್ವೆಟಾಸ್ಲಾವ್ ರೋರಿಕ್‌ರವರು

ವಿಶ್ವದ ಕಲಾಕ್ಷೇತ್ರದಲ್ಲಿ ಮೆರೆದಿದ್ದಾರೆ. ಭಾರತ ರಷ್ಯಾದ ಹಾಗೂ ಕರ್ನಾಟಕದ ಸಾಂಸ್ಕೃತಿಕ ಕ್ಷೇತ್ರದಲ್ಲಿ ತಮ್ಮ ಶಾಶ್ವತ ಅಚ್ಚನ್ನು ಒತ್ತಿದ್ದಾರೆ. ಬೆಂಗಳೂರು ನಗರದ ಸಾಂಸ್ಕೃತಿಕ ಚಟುವಟಿಕೆಗಳಿಗೆ ಅಪಾರ ಕೊಡುಗೆ ನೀಡಿದ್ದಾರೆ. ನಗರವನ್ನು ಶ್ರೀಮಂತಗೊಳಿಸಿದ್ದಾರೆ.

ರೋರಿಕ್‌ರವರ ಕಲಾಕೃತಿಗಳ ವಿವರ

೧. ತಂದೆ ನಿಕೋಲಾಸ್ ರೋರಿಕ್‌ರವರ ಭಾವಚಿತ್ರ

1946ರಲ್ಲಿ ರಚಿಸಿದ ಈ ಕೃತಿ ತೈಲವರ್ಣದಲ್ಲಿದ್ದು ಮಾನವನ ಆಳತೆಗೆ (ಲೈಫ್‌ಸೈಜ್) ಹೊಂದಿಸಲಾಗಿದೆ. ನಿಕೋಲಾಸ್‌ರವರ ಹಿಮಾಲಯ ಪರ್ವತ ಶ್ರೇಣಿಗಳ ಮೇಲಿನ ಪ್ರೇಮವನ್ನು ಪ್ರತಿಬಿಂಬಿಸುವಂತೆ ಹಿನ್ನೆಲೆಯಲ್ಲಿ ಪರ್ವತಗಳನ್ನು ಚಿತ್ರೀಕರಿಸಲಾಗಿದೆ. ಮುನ್ನೆಲೆಯಲ್ಲಿ ಕುಲುಕಣಿವೆಯ ಕುದುರೆಯ ಮೇಲೆ ಕುಳಿತ ಮರದ ಕೆತ್ತನೆಯ ಸವಾರನ ಆಕೃತಿಯನ್ನು ಬಿಂಬಿಸಲಾಗಿದೆ. ಸ್ವೆಟಾಸ್ಲಾವ್‌ರವರ ಭಾವಚಿತ್ರಗಳಲ್ಲಿರುವ ಪ್ರಖರವಾದ ಕಣ್ಣುಗಳು ಮತ್ತು ನಯವಾದ ಮೈ ಚರ್ಮವನ್ನು ಅತ್ಯಂತ ನಾಜೂಕಾಗಿ ತಾಂತ್ರಿಕ ಸಿದ್ಧಿಯಿಂದ ನಿರ್ಮಿಸಿದ್ದಾರೆ. ಈ ಕೃತಿ ಕೇವಲ ಭಾವ ಚಿತ್ರವಾಗಿರದೆ ಸಂಯೋಜನಾ ಗುಣಗಳನ್ನು ಅಳವಡಿಸಿಕೊಂಡಿದೆ. ನಿಕೋಲಾಸ್‌ರವರ ವ್ಯಕ್ತಿತ್ವದ ಹಾಗೂ ಅಂತರಾತ್ಮದ ಮೇರು ಗುಣಗಳನ್ನು ಈ ಚಿತ್ರ ಪ್ರತಿಬಿಂಬಿಸುತ್ತದೆ.

೨. ದೇವಿಕಾರಾಣಿಯವರ ಭಾವಚಿತ್ರ

ಈ ಕೃತಿಯನ್ನು ನ್ಯೂಯಾರ್ಕ್ ನಗರದ ರೋರಿಕ್ ಗ್ಯಾಲರಿಯಲ್ಲಿ ಇಡಲಾಗಿದೆ. ದೇವಿಕಾರಾಣಿಯವರು ಭಾರತದ ಸುಂದರ ಅಭಿನೇತ್ರಿ

ರವೀಂದ್ರನಾಥ್ ಟಾಗೂರರ ಅತ್ಯಂತ ಹತ್ತಿರ ಸಂಬಂಧಿ ಇವರನ್ನು 1945ರಲ್ಲಿ ಸ್ವೆಟಾಸ್ಲಾವ್‌ರವರು ಸಂದರ್ಶಿಸಿದಾಗ ಅವರೊಡನೆ ವಿವಾಹವಾಗುವ ಬಯಕೆ ತೋರಿತು. ಇದರ ಪ್ರತಿಫಲವಾಗಿ ವಿವಾಹವಾದ ನಂತರ ದೇವಿಕಾರವರ ಅನೇಕ ಭಾವಚಿತ್ರಗಳನ್ನು ರಚಿಸಿದ್ದಾರೆ. ಒಂದೊಂದರಲ್ಲಿ ಒಂದೊಂದು ಗುಣ ವಿಶೇಷ. ಈ ಕೃತಿಯಲ್ಲಿ ದೇವಿಕಾರಾಣಿಯವರ ಯೌವನದ ಲಕ್ಷಣಗಳನ್ನು ಹಿನ್ನೆಲೆಯ ನಿಸರ್ಗ ಸೌಂದರ್ಯದ ಅಳವಡಿಕೆಯಿಂದ ಶ್ರೀಮಂತಗೊಳಿಸಿದ್ದಾರೆ. ಭಾವಭಂಗಿ ತನ್ಮಯತೆ ಹಾಗೂ ಅಭಿವ್ಯಕ್ತಿ ಅತ್ಯಂತ ಆಕರ್ಷಕವಾಗಿದೆ. ಈ ಕೃತಿ ವಿಶ್ವದ ಅನೇಕ ಕಲಾ ಗ್ಯಾಲರಿಗಳಲ್ಲಿ ಪ್ರದರ್ಶನವಾಗಿ ಮೆಚ್ಚುಗೆ ಗಳಿಸಿದೆ. ರಷ್ಯಾದಲ್ಲಿ ಈ ಕೃತಿ ಪ್ರದರ್ಶನವಾಗಿದ್ದಾಗ ಸಂದರ್ಶಕರ ಅತ್ಯಂತ ಪ್ರಶಂಸನಾತ್ಮಕ ಹಾಗೂ ಜನಾದರಣೀಯ ಕೃತಿಯೆಂದು ಆಯ್ಕೆಯಾಯಿತು. ಸ್ವೆಟಾಸ್ಲಾವ್‌ರವರ ಭಾವಚಿತ್ರ ಕೃತಿಗಳು ಕೇವಲ ಛಾಯಾಚಿತ್ರವಾಗಿರದೆ ವ್ಯಕ್ತಿಗಳ ಅಂತರಾತ್ಮದ ಅಭಿವ್ಯಕ್ತಿಯ ಭಾವನಾತ್ಮಕ ಚಿತ್ರೀಕರಣವೆಂದು ಪ್ರಸಿದ್ಧಿಯಾಗಿವೆ.

೩. ಪಂಡಿತ್ ನೆಹರೂರವರ ಭಾವಚಿತ್ರ

ಭಾರತದ ಅದ್ವಿತೀಯ ಜನನಾಯಕ ಜವಾಹರ್‌ಲಾಲ್ ನೆಹರೂರವರು ಕುಲು ಕಣಿವೆಗೆ ತಮ್ಮ ಬಿಡುವಿನ ಸಮಯದಲ್ಲಿ ಭೇಟಿಕೊಡುತ್ತಿದ್ದರು. ರೋರಿಕ್‌ರವರ ಕುಟುಂಬದೊಡನೆ ನಿಕಟ ಸಂಪರ್ಕವನ್ನಿಟ್ಟು ಕೊಂಡಿದ್ದರು. ಇವರ ಭೇಟಿಯ ಸಮಯದಲ್ಲಿ ಸ್ವೆಟಾಸ್ಲಾವ್‌ರವರು ಅನೇಕ ಸಲ ಅವರ ಭಾವಚಿತ್ರಗಳನ್ನು ವಿವಿಧ

ಭಂಗಿಗಳಲ್ಲಿ ಸೆರೆಹಿಡಿದಿದ್ದಾರೆ. ಈ ಕೃತಿಗಳು ಕೆಲವು ಸಲ ಕೇವಲ ರೇಖಾಚಿತ್ರರಗಳಾಗಿ, ವರ್ಣ ಸಂಯೋಜನೆಯ ಪ್ರಥಮ ಹಂತದಲ್ಲಿಯೇ ಮುಕ್ತಾಯವಾದವು. ಮತ್ತೆ ಕೆಲವು ಪೂರ್ಣ ಹಂತದಲ್ಲಿ ಮುಕ್ತಾಯಗೊಂಡು ಶ್ರೇಷ್ಠ ಕೃತಿಗಳಾಗಿ ಹೊರಬಂದಿವೆ. ಈ ಕೃತಿ ಪೂರ್ಣ ಹಂತದಲ್ಲಿ ಮುಕ್ತಾಯಗೊಂಡು ಶ್ರೇಷ್ಠ ಕೃತಿಗಳಾಗಿ ಹೊರಬಂದಿವೆ. ಈ ಕೃತಿ ಪೂರ್ಣ ಹಂತದಲ್ಲಿ ಮುಕ್ತಾಯಗೊಂಡಿದ್ದು, ಇದರಲ್ಲಿ ನೆಹರೂರವರ ಭಾವನಾತ್ಮಕತೆಯನ್ನು ಸಾದೃಶವಾಗಿ ಬಿಂಬಿಸಿದ್ದಾರೆ. ಅದರಲ್ಲಿನ ವರ್ಣ ಸಂಯೋಜನೆ ಮತ್ತು ಸೂಕ್ಷ್ಮ ವಿವರಗಳನ್ನು ಕೃತಿಗೆ ಅನುಗುಣವಾಗಿಸಿ ಮೆರುಗು ಕೊಟ್ಟಿದ್ದಾರೆ. ಬಹುಶಃ ಪಂಡಿತ್‌ಜೀಯವರ ಭಾವಚಿತ್ರಗಳನ್ನು ಅತ್ಯಂತ ಶ್ರೇಷ್ಠ ಕಲಾ ಕೃತಿಯೆಂದು ಇದನ್ನು ಪರಿಗಣಿಸಬಹುದಾಗಿದೆ. ಈ ಕೃತಿ ಮಾಸ್ಕೊ ನಗರದ ರೋರಿಕ್ ಅಂತರಾಷ್ಟ್ರೀಯ ಪ್ರತಿಷ್ಠಾನದಲ್ಲಿಡಲಾಗಿದೆ.

೪. ಹೆಣ್ಣು ಮಗಳ ಭಾವಚಿತ್ರ

ಸ್ವೆಟಾಸ್ಲಾವ್‌ರವರು ಕೇವಲ ಪ್ರತಿಷ್ಠಿತ ವ್ಯಕ್ತಿಗಳ ಭಾವಚಿತ್ರಗಳನ್ನು ಮಾಡಿ ತೃಪ್ತಿ ಹೊಂದಿದವರಲ್ಲ. ತಮ್ಮ ಸುತ್ತಮುತ್ತಲಿನ ಜನರಲ್ಲಿ ಅವರಿಗೆ ಪ್ರಿಯವಾದ ವ್ಯಕ್ತಿಗಳ ಅನೇಕ ಭಾವಚಿತ್ರಗಳನ್ನು ಪ್ರಭಾವ ಶಾಲಿಯಾಗಿ ರಚಿಸಿದ್ದಾರೆ. ಈ ಕೃತಿಗಳು ಕಲಾವಿದನ ನೈಜವಾದ ಅಭಿವ್ಯಕ್ತಿಗೆ ಉದಾಹರಣೆಗಳಾಗಿವೆ. ಈ ಹೆಣ್ಣು ಮಗಳ ಕೃತಿ ಬೆಂಗಳೂರಿನ ತಮ್ಮ ತಾಟಗುಣಿ ತೋಟದ ಕೆಲಸಗಾತಿ ಜಯಮ್ಮನವರ ಕೃತಿ, ಇವರಿಗೆ ಅತ್ಯಂತ ಪ್ರಿಯವಾಗಿದ್ದ ಲಕ್ಷ್ಮಿ

ಎಂಬುವವರ ತಂಗಿ. ಅಕ್ಕತಂಗಿಯರು ಸ್ವೆಟಾಸ್ಲಾವ್‌ರವರ ಸ್ಟುಡಿಯೋದ ಚಿತ್ರಗಳ ಹಾಗೂ ಶಿಲ್ಪಕೃತಿಗಳನ್ನು ಸ್ವಚ್ಛವಾಗಿರಿಸಲು ಮತ್ತು ಪರಿಸರವನ್ನು ಕಲಾತ್ಮಕವಾಗಿರಿಸಲು ಸಹಾಯಕರಾಗಿದ್ದರು. ಸ್ವೆಟಾಸ್ಲಾವ್‌ರವರು ಇಬ್ಬರು ಅಕ್ಕತಂಗಿಯರ ಭಾವಚಿತ್ರಗಳನ್ನೂ ರಚಿಸಿದ್ದಾರೆ. ಇದರಲ್ಲಿ ಎರಡನೆಯವಳಾದ ಜಯಮ್ಮನ ಕೃತಿ ಅತ್ಯಂತ ಪ್ರಭಾವಶಾಲಿಯಾಗಿದೆ. ಗ್ರಾಮೀಣ ಹೆಂಗಸರ ಮುಗ್ಧತೆ ಇದರಲ್ಲಿ ರೂಪಿತವಾಗಿದೆ. ವರ್ಣ ಸಂಯೋಜನೆ ಮನೋಹರವಾಗಿದೆ. ಇದು ಕನ್ನಡನಾಡಿನ ಹೆಣ್ಣಿನ ಗುಣ ವಿಶೇಷಗಳ ಉದಾಹರಣೆಯಾಗಿದೆ. ಹಿನ್ನೆಲೆಯಲ್ಲಿ ಈ ಹೆಂಗಸರು ಬೆಳೆಸಿ ಪೋಷಿಸಿದ್ದ ವನಸಿರಿಯ ಪ್ರತಿಬಿಂಬ ಪ್ರಖರವಾದ ವರ್ಣಗಳಲ್ಲಿ ರೂಪಿತವಾಗಿದೆ. ನಸುನಗುವಿನ ಬೆಡಗು ತನ್ಮಯತೆಯ ಸೊಬಗು ಈ ಕೃತಿಗಳಲ್ಲಿ ಮೆರೆಯುತ್ತಿವೆ.

೫. ನೃತ್ಯಗಾತಿ ರೋಷಣ್ ವಜಿಫ್‌ದಾರ್ ಭಾವಚಿತ್ರ

ಸ್ವೆಟಾಸ್ಲಾವ್ ರೋರಿಕ್‌ರವರ ಭಾವ ಚಿತ್ರಗಳನ್ನು ವಿಶ್ವದ ಪ್ರಮುಖ ಕಲಾ ಗ್ಯಾಲರಿಗಳು ಮಾನ್ಯ ಮಾಡಿವೆ. ರಷ್ಯಾದಲ್ಲಿ ಅವರ ಭಾವಚಿತ್ರಗಳನ್ನು ಬಹಳವಾಗಿ ಮೆಚ್ಚಿಕೊಂಡಿದ್ದಾರೆ. ಈ ಶ್ರೇಣಿಯಲ್ಲಿ ಸ್ವೆಟಾಸ್ಲಾವ್‌ರವರೊಡನೆ ನಿಕಟ ಸಂಪರ್ಕ ಹೊಂದಿದ್ದ ಭಾರತೀಯ ನೃತ್ಯಗಾತಿ ಶ್ರೀಮತಿ ರೋಷಣ್ ವಜಿಫ್‌ದಾರ್‌ರವರನ್ನು ವಿವಿಧ ಭಂಗಿಗಳನ್ನು ಸೆರೆಹಿಡಿದಿದ್ದಾರೆ. ಈ ಕೃತಿ ಅತ್ಯಂತ ಸುಂದರವಾಗಿದ್ದು ಎಲ್ಲಾ ರೀತಿಯಲ್ಲೂ ಪೂರ್ಣವಾಗಿರುವ ಅದ್ವಿತೀಯ ಭಾವಚಿತ್ರವೆಂದು ಪರಿಗಣಿಸಲಾಗಿದೆ. ಪಕ್ಕಕ್ಕೆ ತಿರುಗಿಕೊಂಡಂತಿರುವ ಮುಖವನ್ನು

ಸೂಕ್ಷ್ಮವಾದ ಲಕ್ಷಣಗಳನ್ನು ಅಳವಡಿಸಿ ವರ್ಣ ಸಂಯೋಜನೆಯ ಪರಾಕಾಷ್ಠತೆಯಿಂದ ಶೋಭಿಸುವಂತೆ ಮಾಡಿದ್ದಾರೆ. ಪ್ರೇಕ್ಷಕರಿಗೆ ಅತ್ಯಂತ ಪ್ರಿಯವಾದ ಈ ಕೃತಿ ಈಗ ಚಿತ್ರಕಲಾ ಪರಿಷತ್ತಿನ ಸಂಗ್ರಹದಲ್ಲಿದೆ.

೬. "ವಿಜಯ" ಸಂಯೋಜನ ಚಿತ್ರ

೧೯೫೫ರಲ್ಲಿ ರಚಿಸಿದ ಈ ಕೃತಿ ಹೋರಾಟಗಳ ನಡುವೆ ವಿಜಯ ಸಾಧಿಸಿದ ವ್ಯಕ್ತಿಯ ಭಾವವನ್ನು ಚಾತುರ್ಯದಿಂದ ರಚಿಸಿದ್ದಾರೆ. ಎದುರಾಳಿ ಕೆಳಗೆ ಬಿದ್ದು ತಲೆ ತಗ್ಗಿಸಿ ಕೊಂಡಿರುವ ಭಂಗಿ ಹೆಚ್ಚು ಪರಿಣಾಮಕಾರಿಯಾಗಿ ಮೂಡಿದೆ. ಚಿತ್ರದ ಸಂಯೋಜನೆಗನುಗುಣವಾಗಿ ಹಿನ್ನೆಲೆಯನ್ನು ರಚಿಸಿ ಕೃತಿಯಲ್ಲಿ ಸಾಹಸಮಯವಾದ ವಾತಾವರಣವನ್ನು ಸೃಷ್ಟಿಸಿದ್ದಾರೆ. ಪ್ರಸ್ತುತ ಈ ಕೃತಿ ಚಿತ್ರಕಲಾ ಪರಿಷತ್ತಿನ ಸಂಗ್ರಹದಲ್ಲಿದೆ.

೭. ರಷ್ಯಾದ ಮಹಿಳೆ

ವಿವಿಧ ಮಾಧ್ಯಮಗಳಲ್ಲಿ ಪರಿಣತಿ ಪಡೆದಿದ್ದ ಸ್ವೆಟಾಸ್ಲಾವ್‌ರವರು ಪೇಸ್ಟಲ್‌ನಲ್ಲಿ ರಚಿಸಿದ ರಷ್ಯಾದ ಯುವತಿಯೋರ್ವಳ ಭಾವಚಿತ್ರವು ಕಲಾತ್ಮಕವಾಗಿ ಉನ್ನತ ಗುಣಗಳನ್ನು ಹೊಂದಿವೆ. 1943ರಲ್ಲಿ ರಚಿತವಾದ ಈ ಕೃತಿ ಇಂದಿಗೂ ತನ್ನ ನವ್ಯತೆಯನ್ನು ಉಳಿಸಿಕೊಂಡಿದೆ. ವಿವಿಧ ವರ್ಣಗಳ ಅಳವಡಿಕೆಯಿಂದ ಕೃತಿಯ ಸೌಂದರ್ಯ ಅನುಪಮವಾಗಿದೆ.

೮. ಕುಲುಕಣಿವೆ

ಸ್ವೆಟಾಸ್ಲಾವ್‌ರವರು ನಿಸರ್ಗ ದೃಶ್ಯ ಪರಂಪರೆಯಲ್ಲಿ ತಮ್ಮ ತಂದೆಯವರನ್ನು ಅನುಸರಿಸಿ ಅನೇಕ ಹಿಮಾಲಯ ದೃಶ್ಯಗಳ ಕೃತಿಗಳನ್ನು

ರಚಿಸಿದ್ದಾರೆ. ಅದರಲ್ಲಿ ಕಾಂಚನಗಂಗಾ, ಕೈಲಾಸ ಹಾಗೂ ಕುಲುಕಣಿವೆಯ ಅನೇಕ ದೃಶ್ಯಗಳು ಎಂದಿಗೂ ನಿಲ್ಲಬಲ್ಲ ಕಲಾ ಕೃತಿಗಳಾಗಿವೆ. ವರ್ಣ ಸಂಯೋಜನೆಯಲ್ಲಿ ತಮ್ಮ ತಂದೆಯವರಷ್ಟೇ ತಾಂತ್ರಿಕ ಸಿದ್ಧಿ ಸಾಧಿಸಿರುವ ಸ್ವೆಟೊಸ್ಲಾವ್‌ರವರು ರಚಿಸಿರುವ "ಕುಲುಕಣಿವೆ" ಚಿತ್ರದಲ್ಲಿ ಮನಸ್ಸನ್ನು ಪ್ರಫುಲ್ಲಗೊಳಿಸುವ, ಕಣ್ಣಿಗೆ ತಂಪು ನೀಡುವ ವರ್ಣಗಳಿಂದ ಹಿಮಾಚಲ ಪ್ರದೇಶದ ನಿಸರ್ಗ ದೃಶ್ಯದ ಈ ಕೃತಿಯನ್ನು ಚಿತ್ರಿಸಿದ್ದಾರೆ. ಇದರಲ್ಲಿ ಕಣಿವೆಯನ್ನು ಹಾದು ಹೋಗುತ್ತಿರುವ ಹೆಂಗೆಳೆಯರು ತಮ್ಮ ವಸ್ತುಗಳನ್ನು ಬೆನ್ನಿಗೆ ಕಟ್ಟಿಕೊಂಡು ಸಾಗುತ್ತಿರುವ ಸಾಲು ಕೃತಿಗೆ ಮೆರಗು ಕೊಡುತ್ತದೆ. ಮುಂಬದಿಯ ಶಿಲೆಗಳ ಭಾಗ ಕೃತಿಯ ಸಮತೋಲನವನ್ನು ಕಾಪಾಡುವಲ್ಲಿ ಸಹಕಾರಿಯಾಗಿದೆ.

೯. ಕೇರಳ ಸುಂದರಿಯರು - ೧೯೪೪

ಸ್ವೆಟೊಸ್ಲಾವ್ ರೋರಿಕ್‌ರವರ ದಕ್ಷಿಣ ಭಾರತದ ಚಿತ್ರ ಕೃತಿಗಳಲ್ಲಿ ಕೇರಳದ ಜನ ಜೀವನಕ್ಕೆ ಸಂಬಂಧಿಸಿದ ಕೃತಿಗಳು ಹೆಚ್ಚಿನ ಸಂಖ್ಯೆಯಲ್ಲಿವೆ. "ಕೇರಳ ಸುಂದರಿಯರು"ಕೃತಿಯಲ್ಲಿ ಆ ಪ್ರದೇಶದ ಜನಜೀವನವನ್ನು ಪ್ರತಿ ಬಿಂಬಿಸುವ ಉತ್ಕೃಷ್ಟ ಕೃತಿಯಾಗಿದೆ. ಮುಂಗಾರು ಮಳೆಯ ಸನ್ನಿವೇಶದಲ್ಲಿ ಸಮುದ್ರ ದಂಡೆಯ ಪ್ರದೇಶಗಳಲ್ಲಿ ನಿತ್ಯ ಕಾರ್ಯಗಳಲ್ಲಿ ನಿರತರಾಗಿರುವ ಮಹಿಳೆಯರ ವಿವಿಧ ಭಾವ ಭಂಗಿಗಳನ್ನು ತಮ್ಮ ಕೃತಿಗಳಲ್ಲಿ ಅತ್ಯಂತ ಆಕರ್ಷಕವಾಗಿ ಚಿತ್ರಿಸಿದ್ದಾರೆ. ಈ ಭಾಗದ ವಿಷಯಗಳನ್ನು ಆಧಾರವಾಗಿಸಿ ರಚಿಸಿರುವ ಕೃತಿಗಳು ನಮ್ಮನ್ನು ಕೇರಳಕ್ಕೆ ಕೊಂಡೊಯ್ಯುತ್ತವೆ. ಈ ಚಿತ್ರ ಕೃತಿಗಳ ಸರಣಿಯಲ್ಲಿ ಪ್ರಸ್ತುತ ಕೃತಿ ಇವರ ಭಾವನಾ ಪ್ರಪಂಚದ ಪ್ರಭಾವಿ ಚಿತ್ರವೆನ್ನಬಹುದು.

೧೦. ದೇವತೆಗಳ ಪುನರುದಯ

ಕೃತಿ 244 x 112 ಸೆಂ.ಮೀ. ಅಳತಯದಾಗಿದ್ದು 1965ರಲ್ಲಿ ಪೂರ್ಣಗೊಳಿಸಲಾಗಿದೆ. ಇದರಲ್ಲಿ ಸ್ವೆಟಾಸ್ಲಾವ್‌ರವರು ತಾವೇ ವಿವರಿಸುತ್ತಿದ್ದಂತೆ ಪ್ರಪಂಚದ ಜನ ಜೀವನದಲ್ಲಿ ಕಂಡುಬರುತ್ತಿರುವ ಪಿಡುಗುಗಳ ನಿವಾರಣೆಗಾಗಿ ಕ್ರೈಸ್ತರ ನಂಬಿಕೆಗನುಗುಣವಾಗಿ ದೇವತೆಗಳು ಭೂಮಿಯಲ್ಲಿ ಪುನರುದಯದವಾಗಿರುವ ದೃಶ್ಯವನ್ನು ಅಳವಡಿಸಿದ್ದಾರೆ. ಈ ಬೃಹತ್ ಕೃತಿಯಲ್ಲಿ ವರ್ತುಲ ಸಾವರದಲ್ಲಿ ಮೂವರು ದೇವತೆಗಳು ವಿವಿಧ ಭಂಗಿಗಳಲ್ಲಿ ಅವಿರ್ಭವಿಸಿದ್ದಾರೆ. ಇವರು ತಾವು ಭೂಮಿಗೆ ಇಳಿದು ಬಂದಿರುವುದು ಪರಿಸ್ಥಿತಿಯ ಉದ್ಧಾರಕ್ಕಾಗಿ ಎಂಬುದನ್ನು ತೋರಿಸಿಕೊಡುತ್ತಿದ್ದಾರೆ. ಬಲ ಪಕ್ಕದಲ್ಲಿ ನಿಂತಿರುವ ಒಬ್ಬ ದೇವತೆ ನಮ್ಮ ದೃಷ್ಟಿಯನ್ನು ವರ್ತುಲದಲ್ಲಿ ಅಳವಡಿಸಿರುವ ದೇವತೆಗಳ ಕಡೆ ಗಮನ ಹರಿಸುವಂತೆ ಸೂಚಿಸುತ್ತದೆ. ಹಿನ್ನೆಲೆ ವಸ್ತುಸ್ಥಿತಿಗೆ ತಕ್ಕಂತೆ ರಚಿತವಾಗಿದೆ. ಪ್ರಖರವಾದ ವರ್ಣಗಳ ಬಳಕೆಯಿಂದ ಪ್ರಭಾವ ಬೀರಬಲ್ಲ ಈ ಕೃತಿ ಚಿತ್ರಕಲಾ ಪರಿಷತ್ತಿನ ಸಂಗ್ರಹದಲ್ಲಿದೆ.

೧೧. ದೇವವಾಣಿ

ಭಾರತೀಯ ವೇದಾಧ್ಯಯನ ಹಾಗೂ ಗುರುಶಿಷ್ಯ ಪರಂಪರೆಯ ಮೇಲೆ ತಮ್ಮ ನಂಬಿಕೆಯನ್ನು ಸದಾ ಇರಿಸಿಕೊಂಡಿದ್ದ ತಂದೆ ಮಕ್ಕಳು ತಮ್ಮ ಅನೇಕ ಕೃತಿಗಳಲ್ಲಿ ಋಷಿ ಪರಂಪರೆಯ, ಸಂಯೋಜನಾ ಚಿತ್ರಗಳನ್ನು ರಚಿಸಿದ್ದಾರೆ. ದೇವವಾಣಿ ಚಿತ್ರ 1965ರಲ್ಲಿ ರಚಿಸಿದ್ದಾಗಿದೆ. ಈ ಚಿತ್ರದಲ್ಲಿ ದೇವಗಂಗೆ ಬಂಡೆಗಳ ಮಧ್ಯದಲ್ಲಿ ಜ್ಞಾನಧಾರೆಯಂತೆ

ಧುಮುಕುತ್ತಿದೆ. ಈ ಜಲಪಾತದ ಹೊಳಪು ಚಿತ್ರಕ್ಕೆ ಪರಂಪರೆಯ ಭವ್ಯತೆಯನ್ನು ನೆನಪಿಗೆ ತರುತ್ತದೆ. ಅಡಿಯ ಭಾಗದಲ್ಲಿ ಒರ್ವ ಗುರು ಶಿಷ್ಯನಿಗೆ ಭೋದನೆ ಮಾಡುತ್ತಿದ್ದಾರೆ. ಶಿಷ್ಯನಾದರೂ ತದೇಕ ಚಿತ್ತದಿಂದ ಗುರುವಾಣಿಯನ್ನು ಗಮನಿಸುತ್ತಿದ್ದಾನೆ. ಈ ಚಿತ್ರವನ್ನು ವೀಕ್ಷಿಸಿದ ಪ್ರೇಕ್ಷಕನಿಗೆ ಭಾರತೀಯ ಸಂಸ್ಕೃತಿಯ ಭವ್ಯತೆಯನ್ನು ನೆನಪಿಗೆ ತರುತ್ತದೆ. ಇದರ ವರ್ಣ ಸಂಯೋಜನೆ ಮತ್ತು ಹಿನ್ನೆಲೆಯಲ್ಲಿ, ನಿಸರ್ಗವನ್ನು ಅಳವಡಿಸಿರುವುದು ನೆನಪಿಗೆ ತರುತ್ತದೆ. ಇದರ ವರ್ಣ ಸಂಯೋಜನೆ ಮತ್ತು ಹಿನ್ನೆಲೆಯಲ್ಲಿ ನಿಸರ್ಗವನ್ನು ಅಳವಡಿಸಿರುವುದು ಚಿತ್ರಕ್ಕೆ ಮೆರುಗು ಕೊಡುತ್ತದೆ. ಹಿನ್ನೆಲೆ, ಚಿತ್ರದ ಹೆಚ್ಚಿನ ಭಾಗವನ್ನು ಆವರಿಸಿದ್ದು ಕೃತಿಯ ಭವ್ಯತೆಯನ್ನು ಹೆಚ್ಚಿಸಲು ಸಹಕಾರ ನೀಡುವಂತೆ, ಪರಂಪರೆಯ ಇತಿಹಾಸವನ್ನು ದೀರ್ಘವಾಗಿ ತೋರಿಸುವಂತೆ ಭಾಸವಾಗುತ್ತದೆ. ನೆಲ ಜಲ ಮತ್ತು ಪರ್ವತಗಳ ಪರಿಸರದಲ್ಲಿ ದೇವವಾಣಿ ವಿಜೃಂಜಿಸುತ್ತಿದೆ.

೧೨. ಸಂಜೆ

ರಾಜಾಸ್ತಾನದ ಜನಜೀವನದ ಈ ಕೃತಿ ನಿಸರ್ಗದ ಮುಂದೆ ಸಂಜೆ ಚಿಂತಿಸುತ್ತಾ ಕುಳಿತಿರುವ ಮುಗ್ಧ ಯುವತಿಯ ಚಿತ್ರ. ಯುವತಿ ಗಾಢವಾದ ಚಿಂತನದಲ್ಲಿ ತನ್ನನ್ನು ಪೂರ್ಣವಾಗಿ ತೊಡಗಿಸಿಕೊಂಡಿದ್ದಾಳೆ. ಯುವತಿಯು ಭಾವ ಪರವಶಳಾಗಿ ತನ್ನನ್ನು ತಾನೇ ಮರೆತು ಚಿಂತನೆಯ ಗುಂಗಿನಲ್ಲಿ ಮುಳುಗಿದ್ದಾಳೆ. ಕುಳಿತಿರುವ ಶೈಲಿ ಕೃತಿಯ ಔನತ್ಯವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗಿದೆ. ಚಿಂತನೆಯ ವಸ್ತುವಿಗೆ ಬೆಂಬಲವಾಗಿ ರಚಿಸಿರುವ ಹಿನ್ನೆಲೆಯಲ್ಲಿ ಸಸ್ಯಗಳು ಗಾಳಿಯ ಹೊಡತಕ್ಕೆ ಬಾಗಿ

ಯುವತಿಯ ಭಂಗಿಗೆ ಸ್ಪಂದಿಸುತ್ತಿವೆ. ಕೃತಿ ಸಂಗೀತದಿಂದ ಪ್ರಭಾವಿತವಾದ ವಸ್ತು ಸ್ಥಿತಿಯನ್ನು ಹೊರಸೂಸುತ್ತದೆ. ಈ ಚಿತ್ರ ಚಿತ್ರಕಲಾ ಪರಿಷತ್ತಿನ ಸಂಗ್ರಹದಲ್ಲಿದೆ.

೧೩. ದೂತ

ಚಾರಿತ್ರಿಕ ಜೀವನದಲ್ಲಿ "ದೂತ"ನ ಪಾತ್ರ ಪ್ರಮುಖವಾದುದು. ಹಿಂದೆ ದೂರವಾಣಿ ಹಾಗೂ ಮತ್ತಿತರ ಸಂಪರ್ಕ ಸೌಲಭ್ಯಗಳು ಇಲ್ಲದಾಗ ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಅತ್ಯಂತ ಜರೂರಾದ ಸಂದೇಶಗಳನ್ನು ರವಾನಿಸಲು ಕೇವಲ "ದೂತ"ರ ಮೂಲಕ ಸಾಧ್ಯವಾಗುತ್ತಿತ್ತು. ದೂತರು ಸಾಮಾನ್ಯವಾಗಿ ವೇಗವಾಹಿ ಕುದುರೆಯ ಮೇಲೆ ಕುಳಿತು ಸಂದೇಶಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ರವಾನಿಸುತ್ತಿದ್ದರು. ಈ ಹಿನ್ನೆಲೆಯುಳ್ಳ ಈ ಕೃತಿಯಲ್ಲಿ ಬಲದ ಕೆಳಭಾಗದ ಮೂಲೆಯಿಂದ ಅಶ್ವದ ಮೇಲೆ ಕುಳಿತು ವೇಗವಾಗಿ ಸಾಗುತ್ತಿರುವ ದೂತನ ಚಿತ್ರವನ್ನು ರಚಿಸಿದ್ದಾರೆ. ಕುದುರೆ ಹಾಗೂ ವಾಹಕನ ಭಂಗಿ ತಾವು ಕ್ರಮಿಸುತ್ತಿರುವ ಹಾದಿಯಲ್ಲಿ ವೇಗ ಪರಿಮಿತಿಯನ್ನು ಬಿಂಬಿಸುತ್ತದೆ. ಹಿನ್ನೆಲೆ ಹಾಗೂ ಮುಂಭಾಗವು ಈ ವೇಗ ತಾತ್ಪರ್ಯಕ್ಕೆ ಅನುಗುಣವಾಗಿ ಚಿತ್ರದ ವಸ್ತುವಿಗೆ ಸ್ಪಂದಿಸಿ ಇಡೀ ಚಿತ್ರವೇ ವೇಗದ ಪರಿಭ್ರಮಣೆಯಾಗಿ ರಚಿತವಾಗಿದೆ. ವರ್ಣ ಸಂಯೋಜನೆ ಹಾಗೂ ರಚನೆಯ ವೈಶಿಷ್ಟ್ಯದಿಂದ ಚಿತ್ರದ ವಸ್ತು ಕಂಪನದ ಅನುಭವವನ್ನು ನೀಡುತ್ತದೆ.

೧೪. ದಿವ್ಯ ಕೊಳಲು

ಸಂಗೀತದ ಮಜಲಿನಲ್ಲಿ ನಿಸರ್ಗ ಹಾಗೂ ಪ್ರಾಣಿಗಳು ಹೇಗೆ ಸ್ಪಂದಿಸುತ್ತವೆ ಎಂಬುದನ್ನು ಈ ಚಿತ್ರದಲ್ಲಿ ಕಾಣಬಹುದಾಗಿದೆ. ಭವ್ಯ ನಿಸರ್ಗದ ಹಿನ್ನೆಲೆಯಿಂದ ಶ್ರೀಮಂತವಾಗಿರುವ ಈ ಕೃತಿಯ ಬಲ ಭಾಗದಲ್ಲಿ ಒಬ್ಬ ಯುವಕ ತನ್ನದೇ ಭಂಗಿಯಲ್ಲಿ ಕುಳಿತು ಕೊಳಲನ್ನು ನುಡಿಸುತ್ತಿದ್ದಾನೆ. ನಿಸರ್ಗದ ಮಧ್ಯೆ ಕುಳಿತಿರುವ ಈ ಯುವಕ ಹಳ್ಳಿಯ ಹುಂಬುತನದ ಪ್ರತೀಕವಾಗಿ ಮೆರೆದಿದ್ದಾನೆ. ಸನಿಹದಲ್ಲಿ ಒಂದು ಎಮ್ಮೆ ಈತನ ಕೊಳಲಿನ ನಾದಕ್ಕೆ ಮಾರು ಹೋಗಿ ತನ್ಮಯತೆಯಿಂದ ಆಲಿಸುತ್ತಿದೆ. ಎಮ್ಮೆ ನಿಂತಿರುವ ಭಂಗಿ ಚಿತ್ರದ ಸಂಯೋಜನೆಯ ಹಾಗೂ ವಸ್ತುವಿನ ಶ್ರೀಮಂತಿಕೆಗೆ ತನ್ನ ಕೊಡುಗೆಯನ್ನು ನೀಡಿದೆ. ಹಿನ್ನೆಲೆಯ ರಚನೆ ಪ್ರೇಕ್ಷಕನಿಗೆ ರೋಮಾಂಚನಗೊಳ್ಳುವಂತಿದೆ. ಎಮ್ಮೆ ಸಂಗೀತ ಸುಧೆಯ ರಸಸ್ವಾದನೆ ಪ್ರೇಕ್ಷಕನಿಗೆ ವಿಸ್ಮಯಕಾರಿ ಪ್ರಭಾವವನ್ನು ಅನುಭಾವಿಸುತ್ತದೆ.

೧೫. ಮುಂಗಾರು

ಟೆಂಪೆರಾ ವರ್ಣಗಳಲ್ಲಿ ರಚಿಸಿರುವ ಈ ಕೃತಿಯಲ್ಲಿ ಕೇರಳದ ಮುಂಗಾರು ಕಾಲದ ದೃಶ್ಯವನ್ನು ಸೆರೆಹಿಡಿದು ಅತ್ಯಂತ ಮನ ಮೋಹಕವಾಗಿ ರಚಿಸಿದ್ದಾರೆ. ಕಾರ್ಮೋಡಗಳು ದೂರದಲ್ಲಿರುವ ಬೆಟ್ಟಗಳ ಸಾಲುಗಳಿಗೆ ಸಿಲುಕಿ ವಿವಿಧ ರೂಪಗಳನ್ನು ತಾಳಿದೆ. ತನ್ನ ಚೆಲುವಾದ ಭಂಗಿಯನ್ನು ಪ್ರದರ್ಶಿಸುತ್ತಿರುವ ತೆಂಗಿನ ಮರಗಳು ಕೃತಿಯ ಬಲಭಾಗದಲ್ಲಿ ರಚಿತವಾಗಿದೆ. ಗಾಳಿಯ ಹೊಡೆತವನ್ನು ಸಹಿಸಿಕೊಂಡು ದಾರಿಯನ್ನು ಕ್ರಮಿಸುತ್ತಿರುವ ಗ್ರಾಮೀಣ ದಂಪತಿಗಳ ಸಾಂಕೇತಿಕವಾದ

ಅಳವಡಿಕೆಯಿಂದ ಚಿತ್ರದ ಸೊಬಗು ಹೆಚ್ಚಿದೆ. ಆಕಾಶದ ಒಂದು ಕಡೆ ಗಾಢವಾದ ಮೋಡ ಇನ್ನೊಂದು ಕಡೆ ಅರೆ ಬೆಳಕಿನಲ್ಲಿಡುವ ತೆಳು ಮೋಡಗಳು ಚಿತ್ರವನ್ನು ರಸವತ್ತಾಗಿಸಿವೆ. ವರ್ಣಗಳು ಮುಂಗಾರಿನ ಪರಿಸರದ ನೈಜತೆಯನ್ನು ಬಿಂಬಿಸುತ್ತಿದೆ. ಈ ಕೃತಿ ಚಿತ್ರಕಲಾ ಪರಿಷತ್ತಿನ ಸಂಗ್ರಹದಲ್ಲಿದೆ.

೬೧. ದೇವಿಕಾ ರಾಣಿ ಭಾವಚಿತ್ರ ತೈಲವರ್ಣ ೧೯೪೬


ದೇವಿಕಾ ರಾಣಿಯವರ ಭಾವಚಿತ್ರಗಳನ್ನು ಅನೇಕ ಭಂಗಿಗಳಲ್ಲಿ ವಿವಿಧ ಅಳತೆಗಳಲ್ಲಿ, ವಿವಿಧ ಮಾಧ್ಯಮಗಳಲ್ಲಿ ರಚಿಸಿದ್ದಾರೆ. ಸ್ವೆಟಾಸ್ಲಾವ್‌ರವರು ವಿಶ್ವದ ಅನೇಕ ಕಲಾ ಸಂಗ್ರಹಾಲಯಗಳಿಗೆ ಅವಶ್ಯಕತೆ ಎನಿಸುವಷ್ಟು ಮಟ್ಟದ ಭಾವಚಿತ್ರಗಳನ್ನು ಬಿಟ್ಟು ಹೋಗಿದ್ದಾರೆ. ಈ ಸರಣಿಯಲ್ಲಿ ದೇವಿಕಾ ರಾಣಿಯವರ ಭಾವಚಿತ್ರಗಳು ಹೆಚ್ಚಿನ ಮಹತ್ವವನ್ನು ಹೊಂದಿವೆ. ರಷ್ಯಾದ ಅನೇಕ ಸಂಗ್ರಹಾಲಯಗಳಲ್ಲಿ ಈಗಾಗಲೇ ಕೆಲವು ಕೃತಿಗಳು ಪ್ರದರ್ಶಿಸಲ್ಪಟ್ಟಿವೆ. ಪ್ರಸ್ತುತ ಕೃತಿ ದೇವಿಕಾ ರಾಣಿಯವರು ರೋರಿಕ್‌ರವರನ್ನು ವಿವಾಹ ಮಾಡಿಕೊಂಡ ಹೊಸದರಲ್ಲಿ ರಚಿಸಿದ್ದಾಗಿದೆ. ಈ ಕೃತಿಯ ಹಿನ್ನೆಲೆಯಲ್ಲಿ ಆವರಿಸಿರುವ ಪುಷ್ಪಲತೆ ಹಾಗೂ ವೃಕ್ಷದ ಭಾಗ ಭಾವಚಿತ್ರ ಸಂಯೋಜನೆಗೆ ಹೊಂದಿಕೊಂಡಿದೆ. ದೇವಿಕಾರಾಣಿಯವರು ತಮ್ಮ ಪುಷ್ಪಗಳ ಹಾಗೂ ಉದ್ಯಾನವನಗಳ ಪ್ರೇಮದದ್ಯೋತಕವಾಗಿ ತಮ್ಮ ಕೈಯಲ್ಲಿ ಹೂಗೊಂಚಲನ್ನು ಹಿಡಿದಿದ್ದಾರೆ. ಕಣ್ಣುಗಳು ಪ್ರಖರವಾಗಿವೆ. ಹೊದ್ದಿರುವ ಶಾಲು ಮತ್ತು ಉಟ್ಟಿರುವ ಸೀರೆಯ ಶ್ರೀಮಂತಿಕೆ ಯಥಾವತ್ತಾಗಿ ಮೆರೆಯುತ್ತಿವೆ.

೬೨. ಭೂತನಯರು


ಕೇರಳ ಮತ್ತು ತಮಿಳುನಾಡು ಮಧ್ಯೆ ಇರುವ ನಿಸರ್ಗದ ಮಡಿಲಲ್ಲಿರುವ ಗ್ರಾಮೀಣ ಮಹಿಳೆಯರು ತಮ್ಮ ಮಕ್ಕಳೊಡನೆ ಒಡನಾಡುತ್ತಿದ್ದಾರೆ. ಈ ಚಿತ್ರದ ಹಿನ್ನೆಲೆಯಲ್ಲಿ ದೂರದ ಬೆಟ್ಟಗಳು ರಾರಾಜಿಸುತ್ತವೆ. ಮೂರು ಗುಂಪುಗಳಲ್ಲಿರುವ ಹತ್ತಿರದ ಸಸ್ಯಗಳ ಶ್ರೇಣಿಯಲ್ಲಿ ಪ್ರಮುಖವಾಗಿ ಗೊನೆ ಬಿಟ್ಟಿರುವ ಬಾಳೆ ಗಿಡ ಎರಡನೆಯಧು ಬೆಟ್ಟಗಳ ಸಾಲು ಪ್ರದೇಶದಲ್ಲಿ ಕಾಣಸಿಗುವ ಕತ್ತಾಳೆ ಮೂರನೆಯದು ಒಂದು ಮರ. ಈ ಮಧ್ಯೆ ನಿಸರ್ಗಕ್ಕೆ ನೇರ ಹೊಂದಿಕೊಂಡ ಇಬ್ಬರು ಮಹಿಳೆಯರು ತಮ್ಮ ಮಕ್ಕಳು ಹಾಗೂ ಕುಟುಂಬದ ವಸ್ತುಗಳೊಡನೆ ರೂಪುಗೊಂಡಿದ್ದಾರೆ. ಸಸ್ಯಗಳ ಭಂಗಿಗೆ ಸ್ಪಂದಿಸುವಂತೆ ನಿಂತಿರುವ ಒಬ್ಬ ಮಹಿಳೆ ತನ್ನ ಕೈಯಲ್ಲಿ ಸಣ್ಣ ಮಗುವನ್ನು ಎತ್ತಿ ಕೊಂಡಿದ್ದಾಳೆ. ಮತ್ತೋರ್ವ ಮಹಿಳೆ ಗಿಡದ ಮುಂದೆ ಕುಳಿತು ತನ್ನ ಸಂಗಾತಿ ಮಹಿಳೆಯೊಂದಿಗೆ ಸಂಭಾಷಣೆಯಲ್ಲಿ ತೊಡಗಿದ್ದಾಳೆ. ಈ ಮಧ್ಯೆ ಬೆಳೆದ ಹುಡುಗ ಮತ್ತೊಂದು ಕಡೆಯಿಂದ ತನ್ನ ತಾಯಿಯೆಡೆಗೆ ಬರುತ್ತಿದ್ದಾನೆ. ಈ ಸಂಯೋಜನಾ ಚಿತ್ರ ಸೌಮ್ಯವಾದ ವರ್ಣಗಳ ಅಳವಡಿಕೆಯಿಂದ ಗ್ರಾಮೀಣ ಜೀವನದ ನೈಜ ರೂಪವನ್ನು ಪ್ರತಿಬಿಂಬಿಸುತ್ತದೆ. ಈ ಕೃತಿಗೆ ಕೊಟ್ಟಿರುವ ಹೆಸರಿಗೆ ಅನುಗುಣವಾಗಿ ("ಭೂತನಯರು")ಮಣ್ಣಿನ ನೈಜವಾದ ವರ್ಣಗಳನ್ನು ಅಳವಡಿಸಿರುವುದರಿಂದ ಪರಿಸರದ ಸ್ಪಷ್ಟ ಕಲ್ಪನೆ ಭಾಸವಾಗುತ್ತದೆ. ಪ್ರೇಕ್ಷಕನನ್ನು ಹಳ್ಳಿಯ ನಿಸರ್ಗ ಶ್ರೀಮಂತಿಕೆಯ ಬಳಿಗೆ ಒಯ್ಯುತ್ತದೆ.

ರೋರಿಕ್‌ರವರ ವಂಶವೃಕ್ಷ


ಐಸ್‌ಲ್ಯಾಂಡ್ ಮತ್ತು ಯುಟ್ಲಾಂಡ್ ವಿಕಿಂಗ್ಸ್ ವಂಶಸ್ಥರು



(ರೋರಿಕ್ ಪದದ ಅರ್ಥ - ಅತಿಶಯ ಕೀರ್ತಿ)



ನಿಕೋಲಾಸ್ ರೋರಿಕ್‌ರವರ ಭಾವಚಿತ್ರ ತೈಲವರ್ಣ ಚಿತ್ರ 1946



ಪಂಡಿತ ನೆಹರೂರವರ ಭಾವಚಿತ್ರ ತೈಲವರ್ಣ 1946




ದೇವಿಕಾರಾಣಿಯವರ ಭಾವಚಿತ್ರ 1946



"ಹೆಣ್ಣು ಮಗಳು" ಭಾವಚಿತ್ರ ತೈಲವರ್ಣ 1965



‘ನೃತ್ಯಗಾತಿ ರೋಷಣ್ ವಜೀಫದಾರ್ ಭಾವಚಿತ್ರ ತೈಲವರ್ಣ 1958




"ವಿಜಯ" ಸಂಯೋಜನ ಚಿತ್ರ ತೈಲವರ್ಣ 1959




“ರಷ್ಯಾದ ಮಹಿಳೆ” ಭಾವಚಿತ್ರ ಪೇಸ್ಟಲ್ 1943




"ಕುಲು ಕಣಿವೆ" ನಿಸರ್ಗ ಚಿತ್ರ ಜಲವರ್ಣ 1944



"ಕೇರಳ ಸುಂದರಿಯರು" ಸಂಯೋಜನ ಚಿತ್ರ ತೈಲವರ್ಣ 1948




"ದೇವತೆಗಳ ಪುನರುದಯ" ಸಂಯೋಜನ ಚಿತ್ರ, ತೈಲವರ್ಣ 1965



"ದೇವವಾಣಿ" ಸಂಯೋಜನ ಚಿತ್ರ ತೈಲವರ್ಣ 1944




"ರೋಯ ಮೆಗ್ಡೊನಾವ್" ಚಿತ್ರ ತೈಲವರ್ಣ 1944



"ದೂತ್" ಸಂಯೋಜನ ಚಿತ್ರ ತೈಲವರ್ಣ



"ಮುಂಗಾರು" ಸಂಯೋಜನ ಚಿತ್ರ ಟೆಂಪೆರಾ 1947



"ದಿವ್ಯ ಕೊಳಲು" ಸಂಯೋಜನ ಚಿತ್ರ ಟೆಂಪರಾ 1947



"ಅಪೂರ್ವ ಸಂಗಮ"

ಪಂಡಿತ ನೆಹರೂ, ಸ್ವೆಟಾಸ್ಲಾವ್, ಇಂದಿರಾಗಾಂಧಿ, ನಿಕೋಲಾಸ್ ರೋರಿಕ್, ಮಹಮದ್ ಯೂನಸ್.

ಲಲಿತಕಲಾ ಅಕಾಡೆಮಿಯ ಹೊಸ ಪ್ರಕಟಣೆಗಳು

1) **ಇಂಪ್ರೆಷನಿಸಂ**
- ಅ.ಲ. ನರಸಿಂಹನ್ ರೂ. ೧೫

2) **ಎಕ್ಸ್‌ಪ್ರೆಶನಿಸಂ**
- ಚಿ.ಸು. ಕೃಷ್ಣಸೆಟ್ಟಿ ರೂ. ೧೫

ಕೇರಳದ ವರ್ಣಚಿತ್ರ ಲೋಕ
- ವೆಂಕಟರಾಜ ಪುಣಿಚಿತ್ತಾಯ
- ಪಿ.ಎಸ್. ಪುಣಿಚಿತ್ತಾಯ ರೂ. ೧೦

4) **ಪಿ. ಸುಬ್ಬರಾವ್**
- ಎಂ.ಎಸ್. ನಂಜುಂಡರಾವ್ ರೂ. ೧೦

5) **ಸಿಂಗಣ್ಣಾಚಾರ್ಯ**
- ಜಿ.ವಿ. ಗಣೇಶಯ್ಯ ರೂ. ೧೦

6) **ಹೆಚ್. ವೆಂಕಪ್ಪ**
- ಹೆಚ್.ಎಸ್. ಘಾಟಕ್ ರೂ. ೧೦

7) **ಎಂ.ಎಸ್. ಚಂದ್ರಶೇಖರ್**
- ಯು.ಎಸ್. ವೆಂಕಟರಾಮನ್ ರೂ. ೧೦

8) **ಗಂಗರ ಶಿಲ್ಪಕಲೆ**
- ಡಾ. ದೇವರ ಕೊಂಡಾರೆಡ್ಡಿ ರೂ. ೫

9) **ಕರ್ನಾಟಕದಲ್ಲಿ ಆಧುನಿಕ ಶಿಲ್ಪ**
- ಕೆ.ವಿ. ಸುಬ್ರಹ್ಮಣ್ಯ ರೂ. ೫

10) **ಶಿವಾನಂದ ಪಿ. ಅಕ್ಕಿ** ರೂ. ೧೦
- ವಿ.ಟಿ. ಕಾಳೆ

11) **ಪಾಶ್ಚಾತ್ಯ ದೃಶ್ಯ ಕಲಾವಿದರು**
- ಎನ್. ಮರಿಶಾಮಾಚಾರ್ ರೂ. ೧೦

12) **ಶಿಲ್ಪಕಲಾ ಪ್ರಪಂಚ**
ಸಂ. - ಅ.ಲ. ನರಸಿಂಹನ್ ರೂ. ೧೦೦
- ಎನ್. ಮರಿಶಾಮಾಚಾರ್

ಮೇಲ್ಕಂಡ ಎಲ್ಲಾ ಪುಸ್ತಕಗಳ ಪ್ರಧಾನ ಸಂಪಾದಕರು
ಪಿ.ಆರ್. ತಿಪ್ಪೇಸ್ವಾಮಿ